ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

10 ಜನವರಿ 2026 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 298 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಜಪಾನ್‌ನ ಅಕಾನೆ ಯಮಾಗುಚಿ ಗಾಯದಿಂದ ನಿವೃತ್ತರಾದ ಕಾರಣ ಪಿ.ವಿ.ಸಿಂಧು ಅವರು ಮಲೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ತಲುಪಿದರು.


ಕಪಿಲ್ ದೇವ್ ಕಲಿಸಿದ ಸಹನೆಯ ಪಾಠ » 2


ವಿಶ್ವದ ಅತ್ಯಂತ ವೇಗದ ಆರ್ಥಿಕತೆಯಾಗಿ ಭಾರತ » 3


ಕೃಷ್ಣಾ ಮೇಲ್ದಂಡೆ ಯೋಜನೆಗೆ ಕೇಂದ್ರ ಅಸಹಕಾರ » 4

# ಕನ್ನಡದ ಮೇಲೆ ಕೇರಳ ಸವಾರಿ

## ಮಲಯಾಳಿ ಭಾಷಾ ಮಸೂದೆಗೆ ಕನ್ನಡಿಗರ ವಿರೋಧ | ಹಿಂಪಡೆದುಕೊಳ್ಳುವಂತೆ ಸಿಎಂ ಸಿದ್ದರಾಮಯ್ಯ ಒತ್ತಾಯ

• ಪ್ರಜೋದಯ ವರದಿ

**ಬೆಂಗಳೂರು:** ಕೇರಳ ಸರ್ಕಾರ ಜಾರಿಗೆ ತಂದಿರುವ ಮಲಯಾಳಿ ಭಾಷಾ ಮಸೂದೆ -2025ಕ್ಕೆ ಕರ್ನಾಟಕದಲ್ಲಿ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದೆ. ಕೋಗಿಲು ಘಟನೆ ಬೆನ್ನಲ್ಲೇ ಮತ್ತೊಮ್ಮೆ ಕೇರಳ ಹಾಗು ಕರ್ನಾಟಕ ನಡುವಿನ ಸಂಘರ್ಷದ ವಾತಾವರಣ ನಿರ್ಮಾಣವಾಗಿದೆ.

ಕೇರಳದ ನಡೆಗೆ ಕನ್ನಡಿಗರಿಂದ ತೀವ್ರ ವಿರೋಧ ವ್ಯಕ್ತವಾಗಿದ್ದು, ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿ ಸಚಿವರು, ಕನ್ನಡ ಪರ ಹೋರಾಟಗಾರರು ಟೀಕಿಸಿದ್ದಾರೆ.

ಕೇರಳದ ಗಡಿ ಪ್ರದೇಶದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕನ್ನಡಿಗರಿದ್ದಾರೆ. ಕಾಸರಗೋಡು ಹಾಗು ಮಂಜೇಶ್ವರ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಇದ್ದಾರೆ. ಅಲ್ಲದೆ ಕನ್ನಡ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಹೀಗಿದ್ದರೂ ಮಲೆಯಾಳಿ ಭಾಷಾ ಮಸೂದೆ -2025 ಜಾರಿಗೆ ತರಲು ಕೇರಳ ಸರ್ಕಾರ ಮುಂದಾಗಿದ್ದು ವಿರೋಧಕ್ಕೆ ಕಾರಣವಾಗಿದೆ.

### ಮೂಲಭೂತ ಹಕ್ಕು ದಮನ

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿಕ್ರಿಯಿಸಿ, ಇಂತಹದ್ದೊಂದು ಕಾನೂನು ಜಾರಿಗೆ ಬಂದರೆ ಕೇರಳದ ಗಡಿ ಜಿಲ್ಲೆಗಳಲ್ಲಿ ಮುಖ್ಯವಾಗಿ ಕಾಸರಗೋಡಿನಲ್ಲಿ ವಾಸಿಸುತ್ತಿರುವ ಕನ್ನಡಿಗರು ಮಾತೃ ಭಾಷೆಯನ್ನು ಕಲಿಯುವ ಅವಕಾಶದಿಂದ ವಂಚಿತರಾಗಲಿದ್ದಾರೆ. ಭಾಷಾ ಅಲ್ಪಸಂಖ್ಯಾತರ ಮೂಲಭೂತ ಹಕ್ಕನ್ನು ದಮನ

» ನಾಲ್ಕನೇ ಪುಟದಲ್ಲಿ



"ಕೇರಳದಲ್ಲಿ ಆನೆ ತುಳಿತಕ್ಕೆ ಒಳಗಾಗಿ ಸತ್ತರೂ, ವಯನಾಡಿನಲ್ಲಿ ಪ್ರಕೃತಿ ವಿಕೋಪ ಉಂಟಾದರೂ, ಮಲಯಾಳಿಗಳ ಪರವಾಗಿ ನಿಲ್ಲುವ ರಾಜ್ಯ ಸರ್ಕಾರ ಹಾಗು ಕಾಂಗ್ರೆಸ್ ನಾಯಕರು, ಕೇರಳ ಸರ್ಕಾರದ ಪ್ರಸ್ತಾಪಿತ ಮಲಯಾಳಿ ಭಾಷಾ ಮಸೂದೆ ಜಾರಿಗೊಳಿಸಿರುವುದರ ವಿರುದ್ಧ ಧ್ವನಿ ಎತ್ತಿ, ಕನ್ನಡಿಗರ ಪರ ನಿಲ್ಲುತ್ತಾರಾ?

- ಆರ್.ಅಶೋಕ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ

### ರಾಷ್ಟ್ರಪತಿ ಭೇಟಿಗೆ ಸಿಎಂ-ಡಿಸಿಎಂ ನಿಯೋಗ

ಕೇರಳ ಸರ್ಕಾರ ಅಂಗೀಕರಿಸಿರುವ ಮಲಯಾಳಂ ಭಾಷಾ ಮಸೂದೆಯು ಗಡಿ ಪ್ರದೇಶಗಳಲ್ಲಿ, ಅದರಲ್ಲೂ ವಿಶೇಷವಾಗಿ ಕಾಸರಗೋಡಿನ ಕನ್ನಡಿಗರ ಹಿತಾಸಕ್ತಿಗಳ ಮೇಲೆ ಪರಿಣಾಮ ಬೀರಲಿದೆ. ಹಾಗಾಗಿ ಅದಕ್ಕೆ ಅನುಮೋದನೆ ನೀಡದಂತೆ ಕೋರಲು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ನಿಯೋಗ ಶೀಘ್ರವೇ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ಮಲಯಾಳಂ ಭಾಷಾ ಮಸೂದೆಯು ಕೇರಳದ ಗಡಿ ಪ್ರದೇಶಗಳಲ್ಲಿ ವಾಸಿಸುವ ಕನ್ನಡಿಗರ ಹಿತಾಸಕ್ತಿಗೆ ವಿರುದ್ಧವಾಗಿದೆ. ಕಾಸರಗೋಡಿನಲ್ಲಿ 7.5 ಲಕ್ಷ ಕನ್ನಡಿಗರಿದ್ದು, 210 ಕನ್ನಡ ಮಾಧ್ಯಮ ಶಾಲೆಗಳಿವೆ. ಸಂವಿಧಾನದ 350ಬಿ ವಿಧಿಯ ನಿಬಂಧನೆಗಳ ಅಡಿ, ಕೇರಳ ಸರ್ಕಾರ ಕಳುಹಿಸಿರುವ ಮಸೂದೆಗೆ ಅನುಮೋದನೆ ನೀಡದಂತೆ ರಾಷ್ಟ್ರಪತಿಗಳನ್ನು ಒತ್ತಾಯಿಸುತ್ತೇವೆ. ಈ ಸಂಬಂಧ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಜೊತೆ ಮಾತುಕತೆ ನಡೆಸಿದ್ದೇವೆಂದರು.

# ಜಿಲ್ಲಾಧಿಕಾರಿ ಕಾರು ಜಪ್ತಿಗೆ ನ್ಯಾಯಾಲಯ ಆದೇಶ

• ಪ್ರಜೋದಯ ವರದಿ

**ಹಾಸನ:** ಯಗಚಿ ನಾಲೆಗಾಗಿ ಸ್ವಾಧೀನ ಪಡಿಸಿಕೊಂಡ ಭೂಮಿಗೆ ಪರಿಹಾರ ನೀಡಲು ವಿಳಂಬ ಮಾಡಿದ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಕಾರನ್ನು ಜಪ್ತಿ ಮಾಡುವಂತೆ ನ್ಯಾಯಾಲಯ ಆದೇಶದ ಮೇರೆಗೆ ವಕೀಲರ ಜೊತೆ ಆಗಮಿಸಿದ ರೈತ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರ ಕಾರು ಜಪ್ತಿಗೆ ಮುಂದಾದರು.

15 ವರ್ಷಗಳ ಹಿಂದೆ ಆಲೂರು ತಾಲೂಕಿನ ಭಕ್ತರವಳ್ಳಿ ಗ್ರಾಮದ ರೈತ ಮರೀಗೌಡ ಎಂಬುವವರಿಗೆ ಸೇರಿದ್ದ ಸರ್ವೆ ನಂ 44/1 ರಲ್ಲಿ ಹತ್ತುವರೆ ಗುಂಟೆ ಜಮೀನನ್ನು ಯಗಚಿ ನಾಲೆಗಾಗಿ ನೀರಾವರಿ ಇಲಾಖೆ ಸ್ವಾಧೀನ ಪಡಿಸಿಕೊಂಡಿದ್ದು, 11,22,559 ರೂ. ಪರಿಹಾರ ನೀಡಬೇಕಿತ್ತು. ಹದಿನೈದು ವರ್ಷ ಕಳೆದರೂ ಪರಿಹಾರ ನೀಡದ ಹಿನ್ನಲೆ ರೈತ ಮರೀಗೌಡ ಹಾಗು ಅವರ ಮಕ್ಕಳು ನ್ಯಾಯಾಲಯದ ಮೊರೆ ಹೋಗಿದ್ದರು.

ಶುಕ್ರವಾರ ಮಧ್ಯಾಹ್ನ ವಕೀಲ ಮಂಜುನಾಥ್ ಜೊತೆ ಆಗಮಿಸಿದ ಜಿಲ್ಲಾಧಿಕಾರಿ ಕಾರು ಜಪ್ತಿಗೆ ಮುಂದಾದರು. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ತಮ್ಮ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸುತ್ತಿದ್ದರು. ಅವರ ಪರವಾಗಿ ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ಸಂಜೆಯೊಳಗೆ ಪರಿಹಾರ ನೀಡಲಾಗುವುದು, ಸಮಯ ಕೊಡಿ ಎಂದು ಮನವಿ ಮಾಡಿದರು.



ಅವರ ಮಾತು ಕೇಳದ ವಕೀಲರು ಹಾಗು ಮರೀಗೌಡ ಪುತ್ರ, ಕಾರು ಎಳೆದೊಯ್ಯಲು ಮುಂದಾದರು. ಕಾರು ಎಳೆದರೆ ಹಾನಿ ಆಗಲಿದೆ ಎಂದು ಕ್ರೇನ್ ಚಾಲಕ ವಾಪಾಸ್ ಹೋದರು. ಬಳಿಕ ಸಂಜೆಯೊಳಗೆ ಪರಿಹಾರ ನೀಡುವುದಾಗಿ ಭರವಸೆ ನೀಡಿದ ಹಿನ್ನಲೆ ರೈತರು ಜಪ್ತಿ ಮಾಡಿಕೊಂಡ ಕಾರನ್ನು ಅಲ್ಲೇ ಬಿಟ್ಟು ಪರಿಹಾರಕ್ಕಾಗಿ ಕಾದು ಕುಳಿತರು.

### ಎಸಿ-ವಕೀಲ ವಾಗ್ವಾದ

ಕಾರು ಜಪ್ತಿಗೆ ಮುಂದಾದ ವೇಳೆ ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ಮತ್ತು ವಕೀಲ ಮಂಜುನಾಥ್ ನಡುವೆ ವಾಗ್ವಾದ ನಡೆಯಿತು. ಭೂಸ್ವಾಧೀನ ಅಧಿಕಾರಿಯನ್ನು ಹೊಣೆ ಮಾಡುವ ಬದಲು ಜಿಲ್ಲಾಧಿಕಾರಿಯನ್ನು ಸೇರಿಸಿರುವುದೇ ತಪ್ಪಿದೆ ಎಂದು ಹೇಳಿದರು. ವಿರೋಧ ವ್ಯಕ್ತಪಡಿಸಿದ ವಕೀಲ, ನೀವು ಏನೇ ಹೇಳುವುದಿದ್ದರೂ ನ್ಯಾಯಾಲಯಕ್ಕೆ ಬಂದು ಹೇಳಿ. ಕಾರನ್ನು ಕೋರ್ಟ್ ಬಳಿಗೆ ತೆಗೆದುಕೊಂಡು ಹೋಗುತ್ತೇವೆಂದು ಪಟ್ಟು ಹಿಡಿದರು. ಈ ವೇಳೆ ಅಸಮಾಧಾನಗೊಂಡ ಉಪವಿಭಾಗಾಧಿಕಾರಿ, ಕಾರಿಗೆ ಹಾನಿಯಾದರೆ ನೀವೇ ಹೊಣೆಗಾರಾಗಬೇಕೆಂದು ಹೇಳಿದರು.

# ಮಹಾನಗರ ಪಾಲಿಕೆಗೆ 2.ಕೋ.ರೂ.ವಾಹನಗಳ ಸೇರ್ಪಡೆ

• ಪ್ರಜೋದಯ ವರದಿ

**ಹಾಸನ:** ಮಹಾನಗರ ಪಾಲಿಕೆಯ 15ನೇ ಹಣಕಾಸು ಯೋಜನೆಯಡಿ ನೂತನವಾಗಿ ಖರೀದಿಸಿದ್ದ ಜೆಸಿಬಿ ಹಾಗು ಕಸ ತುಂಬುವ ಟಿಪ್ಪರ್ ಲಾರಿಗಳಿಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಶುಕ್ರವಾರ ಪೂಜೆ ಸಲ್ಲಿಸಿ, ಸಾರ್ವಜನಿಕರ ಸೇವೆಗೆ ಸಮರ್ಪಣೆ ಮಾಡಿದರು.

2 ಕೋ.ರೂ. ವೆಚ್ಚದಲ್ಲಿ ಎರಡು ಟಿಪ್ಪರ್ ಲಾರಿ, ಎರಡು ಜೆಸಿಬಿ, ಸ್ವಚ್ಛತಾ ಯಂತ್ರೋಪಕರಣಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ನಗರ ಪಾಲಿಕೆ ಆಯುಕ್ತರು, ಇಂಜಿನೀಯರ್, ಅಧಿಕಾರಿಗಳು ನಾಗರಿಕರ ಸೇವೆಗೆ ಉಪಯುಕ್ತ ಯಂತ್ರೋಪಕರಣ ಖರೀದಿ ಮಾಡಿದ್ದು, ಸದ್ಬಳಕೆಯಾಗಬೇಕೆಂದರು.

ನಗರದ ಅನೇಕ ಕಡೆಗಳಲ್ಲಿ ಕಸ ಹಾಕಲು ಸ್ಥಳ ಗುರುತಿಸಲಾಗಿದ್ದು, ಪಾಲಿಕೆಯ ವಾಹನಗಳು ಬರಲಿವೆ. ಆ ಸ್ಥಳದಲ್ಲಿ ಕಸ ಸುರಿಯದೇ ಪಾಲಿಕೆ ವಾಹನ ಗಳಲ್ಲೇ ಕಸ ಸುರಿಯಬೇಕು.



"ಸ್ವಚ್ಛತೆ ಕಾಪಾಡುವುದು ನಗರದ ಪ್ರತಿಯೊಬ್ಬರ ಕರ್ತವ್ಯ. ದಿನ ನಿತ್ಯ ಉತ್ಪಾದನೆ ಆಗುವ ಕಸವನ್ನು ಎಲ್ಲೆಂದರಲ್ಲಿ ಬಿಸಾಡದೆ, ಮಹಾನಗರ ಪಾಲಿಕೆಯ ಕಸದ ವಾಹನಗಳಲ್ಲೇ ಹಾಕುವ ಮೂಲಕ ನಗರ ಪಾಲಿಕೆಯ ಸ್ವಚ್ಛತೆಗೆ ಸಹಕರಿಸಬೇಕು.

-ಹೆಚ್.ಪಿ.ಸ್ವರೂಪ್, ಶಾಸಕ

ನಗರ ಪಾಲಿಕೆಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿ ಅನುದಾನ ಬಂದಿಲ್ಲ. ಸಿಬ್ಬಂದಿ ನೇಮಕಕ್ಕೂ ಅವಕಾಶ ನೀಡಿಲ್ಲ. ಈ ಸಂಬಂಧ ಬೆಳಗಾವಿ ಅಧಿವೇಶನದಲ್ಲೂ ಚರ್ಚೆ ಮಾಡಲಾಗಿದೆ. ಆದರೆ, ಸರ್ಕಾರ ಆಗುವುದಿಲ್ಲವೆಂದು ಉತ್ತರ ನೀಡಿದೆ. ಈ ಬಗ್ಗೆ ಮುಂದೆಯೂ ಪ್ರಯತ್ನ ಮಾಡಲಾಗುವುದು. ಅನುದಾನ, ಸಿಬ್ಬಂದಿ ಇಲ್ಲದೆ ನಗರದ ಅಭಿವೃದ್ಧಿ ಕುಂಠಿತ ಆಗಿದೆ ಎಂಬುದು ಸತ್ಯ. ಶಾಸಕರಿಗೂ ಸೂಕ್ತ ರೀತಿಯ ಅನುದಾನ ನೀಡಿಲ್ಲ. ಆದರೂ ನಾಲ್ಕೂವರೆ ಕೋ.ರೂ. ಶಾಸಕರ ಅನುದಾನವನ್ನೂ ನಗರದ ವಿವಿಧ ಅಭಿವೃದ್ಧಿಗೆ ವಿನಿಯೋಗ ಮಾಡಲಾಗಿದೆ. ಮುಖ್ಯಮಂತ್ರಿ ನಿಧಿ ಸೇರಿ ವಿವಿಧ ಅನುದಾನದಡಿ ಹಣ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡುವ ಪ್ರಯತ್ನ ಮುಂದುವರಿಯಲಿದೆ ಎಂದು ಹೇಳಿದರು.

ನಗರಪಾಲಿಕೆ ಸದಸ್ಯ ಎಸ್.ಹೆಚ್ ವಾಸುದೇವ್, ಇಂಜಿನೀಯರ್ ಕೆ. ಆರ್.ಕವಿತಾ ಹಲವು ಅಧಿಕಾರಿಗಳು ಇದ್ದರು.

# ಎತ್ತಿನಹೊಳೆ ಯೋಜನೆ ಮುಖ್ಯ ಕಚೇರಿ ವಿದ್ಯುತ್ ಕಡಿತ

## 223 ಕೋಟಿ ರೂ. ವಿದ್ಯುತ್ ಬಿಲ್ ಬಾಕಿ | ನೋಟೀಸ್ ನೀಡಿದರೂ ಸಿಗದ ಸ್ಪಂದನೆ

• ಪ್ರಜೋದಯ ವರದಿ

**ಸಕಲೇಶಪುರ :** ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದ ಕಚೇರಿ ಕೋಟ್ಯಾಂತರ ರೂಪಾಯಿ ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡ ಪರಿಣಾಮ ವಿದ್ಯುತ್ ಸರಬರಾಜು ಕಡಿತಗೊಂಡು ಕತ್ತಲಲ್ಲಿ ಮುಳುಗಿದೆ.

ಎತ್ತಿನಹೊಳೆ 2ನೇ ಹಂತದ ಕಾಮಗಾರಿ ಪೂರ್ಣಗೊಳ್ಳದಿರುವುದರಿಂದ ಈ ಬಾರಿ ಎತ್ತಿನಹೊಳೆ ನೀರನ್ನು ಹೇಮಾವತಿ ನದಿಗೆ ಹರಿಸಲಾಗಿದ್ದು, ವಿದ್ಯುತ್‌ಗಾಗಿ ಕೋಟ್ಯಾಂತರ ರೂ. ಖರ್ಚು ಮಾಡಲಾಗಿದೆ. 2024ರ ಸೆಪ್ಟೆಂಬರ್‌ನಲ್ಲಿ ಎತ್ತಿನಹೊಳೆ ಯೋಜನೆಗೆ ಚಾಲನೆ ನೀಡಲಾಗಿದ್ದು ಹಾಸನ, ಚಿಕ್ಕಮಗಳೂರು ಹಾಗು ಚಿತ್ರದುರ್ಗ ಜಿಲ್ಲೆಗಳ ದ್ವಾರಸಮುದ್ರ, ವೇದ ವ್ಯಾಲಿ, ವಾಣಿವಿಲಾಸ ಕೆರೆಗಳಿಗೆ



ತಾಲ್ಲೂಕಿನ ಹೆಬ್ಬನಹಳ್ಳಿಯಲ್ಲಿ ನೀರನ್ನು ಪಂಪ್ ಮಾಡಿ ಹರಿಸಲಾಗಿತ್ತು. 2024ರಲ್ಲಿ ಸುಮಾರು 1.5 ಟಿಎಂಸಿ ನೀರು ಹರಿದಿದ್ದು, 14 ಮೆಗಾವ್ಯಾಟ್ ವಿದ್ಯುತ್ ಖರ್ಚು ಮಾಡಲಾಗಿದೆ. ಸುಮಾರು 52 ಕೋ. ರೂ. ವಿದ್ಯುತ್ ಬಿಲ್ ಎತ್ತಿನಹೊಳೆ ಯೋಜನೆಯಿಂದ ಪಾವತಿ ಮಾಡಬೇಕಾಗಿತ್ತು.

2025ರಲ್ಲಿ ಉತ್ತಮ ಮಳೆಯಿಂದಾಗಿ ರಾಜ್ಯದ ಕೆರೆಗಳು, ಜಲಾಶಯಗಳು ತುಂಬಿದ್ದರಿಂದ ಎತ್ತಿನಹೊಳೆಯಿಂದ ಹೇಮಾವತಿ ನದಿಗೆ ನೀರು ಹರಿಸಿ ಸುಮಾರು 2 ಟಿಎಂಸಿ ನೀರನ್ನು ಬಿಡಲಾಗಿದೆ. ಇತರ ಕೆರೆಗಳಿಗೆ 0.3 ಟಿಎಂಸಿ ನೀರನ್ನು ಹರಿಸಿದ್ದು, ಒಟ್ಟು 18.25 ಮೆಗಾವ್ಯಾಟ್ ವಿದ್ಯುತ್ ವ್ಯಯ ಮಾಡಲಾಗಿದೆ. ಒಟ್ಟಾರೆ 223 ಕೋ.ರೂ. ಎತ್ತಿನಹೊಳೆ ಯೋಜನೆಯಿಂದ ನೀರು ಹರಿಸಿದ ಹಿನ್ನಲೆಯಲ್ಲಿ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಕೆಪಿಟಿಸಿಎಲ್‌ಗೆ ಪಾವತಿ ಮಾಡಬೇಕಾಗಿದೆ. ಪ್ರತಿ ತಿಂಗಳು ಸರಾಸರಿ 9 ರಿಂದ 10 ಕೋ. ರೂ. ಪಾವತಿ ಮಾಡಬೇಕಾಗಿದೆ.

ಎತ್ತಿನಹೊಳೆ ಯೋಜನೆಯ ವಿದ್ಯುತ್ ಇಲಾಖೆಗೆ ದೀರ್ಘ ಕಾಲದಿಂದ ಬಾಕಿ ಉಳಿಸಿಕೊಂಡಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ್ದಾರೆ. ಪ್ರತಿ ತಿಂಗಳು ನೋಟೀಸ್ ನೀಡಿದರೂ ಬಿಲ್ ಪಾವತಿಯಾಗದ ಹಿನ್ನಲೆಯಲ್ಲಿ ಕೊನೆಗೆ ವಿದ್ಯುತ್ ನಿಗಮ ಮಂಡಳಿ ಕಚೇರಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿದೆ.

### ಜನರೇಟರ್ ವ್ಯವಸ್ಥೆ

ವಿದ್ಯುತ್ ಸಂಪರ್ಕ ಕಡಿತದಿಂದಾಗಿ ಕಚೇರಿಯ ದೈನಂದಿನ ಕಾರ್ಯ ಚಟುವಟಿಕೆಗಳು ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿವೆ. ಕಂಪ್ಯೂಟರ್, ದಾಖಲೆ ಸಂರಕ್ಷಣೆ, ಆನ್‌ಲೈನ್ ವರದಿ ಸಲ್ಲಿಕೆ, ಸಭೆಗಳು ಸೇರಿ ಆಡಳಿತಾತ್ಮಕ ಕಾರ್ಯಗಳು ಜನರೇಟರ್ ಮೂಲಕವೇ ನಿರ್ವಹಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯ ಸರ್ಕಾರದ ಪ್ರಮುಖ ಯೋಜನೆಯಾದ ಎತ್ತಿನಹೊಳೆ ಯೋಜನೆಯ ಕಚೇರಿಯೇ ಈ ರೀತಿಯ ದುಸ್ಥಿತಿಗೆ ತಲುಪಿರುವುದು ಸಾರ್ವಜನಿಕ ವಲಯದಲ್ಲಿ ತೀವ್ರ ಟೀಕೆಗೆ ಕಾರಣವಾಗಿದೆ. ಕೋಟ್ಯಾಂತರ ರೂ. ವೆಚ್ಚದಲ್ಲಿ ನಡೆಯುತ್ತಿರುವ ಯೋಜನೆಯಲ್ಲಿ ವಿದ್ಯುತ್ ಬಿಲ್ ಪಾವತಿಸುವ ಮಟ್ಟದ ಹಣಕಾಸು

» ನಾಲ್ಕನೇ ಪುಟದಲ್ಲಿ

# ಸಮಾನತೆ ತರುವಲ್ಲಿ ತೇಪೆ ಹಾಕುವ ರಾಜಕಾರಣ: ಕೆ.ಎಂ.ಶಿ.

## ಸರ್ಕಾರದಿಂದ ಶೋಷಿತ ವರ್ಗಗಳ ಮೇಲೆತ್ತುವ ಪ್ರಾಮಾಣಿಕ ಪ್ರಯತ್ನ ನಡೆಯಲಿ

• ಪ್ರಜೋದಯ ವರದಿ

**ಹಾಸನ:** ಶತಮಾನಗಳಿಂದ ಸಮಾಜದಲ್ಲಿ ನಡೆಯುತ್ತಿರುವ ಶೋಷಣೆ, ವಿಜ್ಞಾನ ಮತ್ತು ತಂತ್ರಜ್ಞಾನ ಯುಗದಲ್ಲಿಯೂ ಮುಂದುವರಿದಿರುವುದು ದುಃಖಕರ ಸಂಗತಿ. ಸಮಾಜ ಅಭಿವೃದ್ಧಿ ಶಿಖರ ತಲುಪುತ್ತಿದ್ದರೂ ನಾವಿನ್ನೂ ಶೋಷಿತರಾಗಿದ್ದೇವೆಂಬ ಭಾವನೆ ಮೂಡುತ್ತಿರುವ ಬಗ್ಗೆ ಗಂಭೀರವಾಗಿ ಚಿಂತಿಸಬೇಕಾಗಿದೆ ಎಂದು ಗೃಹಮಂಡಳಿ ಅಧ್ಯಕ್ಷರೂ ಆದ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಮೀಸಲಾತಿಯಲ್ಲಿ ಕೆನೆಪದರ ಮತ್ತು ಖಾಸಗಿ ಕ್ಷೇತ್ರದಲ್ಲಿ



ಮೀಸಲಾತಿ ವಿಚಾರದ ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಶೋಷಿತ ಸಮುದಾಯಗಳಿಗೆ ಸಮಾನತೆ ದೊರಕಿಸುವಲ್ಲಿ ತೇಪೆ ಹಾಕುವ ರಾಜಕಾರಣ ನಡೆಯುತ್ತಿದೆ. ಮಾನವ ಸಂಪತ್ತನ್ನು ಹೇಗೆ ಸದ್ಬಳಕೆ ಮಾಡಬೇಕೆಂಬುದರ ಬಗ್ಗೆ ಸರ್ಕಾರಗಳು ಗಂಭೀರವಾಗಿ ಯೋಚಿಸಬೇಕಾಗಿದೆ. ಶೋಷಿತ ವರ್ಗಗಳನ್ನು ಮೇಲೆತ್ತುವ ಪ್ರಾಮಾಣಿಕ ಪ್ರಯತ್ನ ಮಾಡಿದಾಗ ಮಾತ್ರ ಸಮಾಜದ ಸಮಗ್ರ ಸುಧಾರಣೆ ಸಾಧ್ಯವೆಂದರು.

ಸಂವಿಧಾನದ ಮೌಲ್ಯಗಳನ್ನು ಅರ್ಥಮಾಡಿಕೊಂಡರೆ ಭಾರತ ವಿಶ್ವಕ್ಕೆ ದಾರಿ ತೋರಿಸುತ್ತದೆ. ಆದರೆ, ಸಂವಿಧಾನದ ಭಾವನಾತ್ಮಕ ಅರ್ಥ ಅಳವಡಿಸಿಕೊಳ್ಳುವಲ್ಲಿ ರಾಜಕಾರಣಿಗಳು ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಶೋಷಿತ ವರ್ಗಗಳ ಪರವಾಗಿ ಹೋರಾಟ ನಡೆಸುವ ಮೂಲಕ ಇತಿಹಾಸದ ಹೊಸ ಅಧ್ಯಾಯ ರಚಿಸುತ್ತಿದ್ದಾರೆಂದು ಶ್ಲಾಘಿಸಿದರು.

ಶೋಷಣೆ ಕೇವಲ ದಲಿತ ಸಮುದಾಯಕ್ಕೆ ಮಾತ್ರ ಸೀಮಿತವಾಗಿಲ್ಲ. ಜಾತಿ ವ್ಯವಸ್ಥೆಯೊಳಗೆ ಇರುವ ಹಲವಾರು ವರ್ಗಗಳು ಒಂದಿಲ್ಲೊಂದು ರೀತಿಯಲ್ಲಿ ಅನ್ಯಾಯ ಮತ್ತು ಸಂಕಷ್ಟ ಅನುಭವಿಸುತ್ತಿವೆ. ಇಂತಹ ಅಸಮಾನತೆ ನಿವಾರಿಸಲು ಬಸವಣ್ಣ

» ನಾಲ್ಕನೇ ಪುಟದಲ್ಲಿ

# ನಾಳೆ ಬೇಲೂರಿನಲ್ಲಿ ಜೆಡಿಎಸ್ ಸಭೆ

• ಪ್ರಜೋದಯ ವರದಿ

**ಬೇಲೂರು:** ವಿಧಾನಸಭಾ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರ ಸಭೆ ಜ. 11ರ ಭಾನುವಾರ ಬೆಳಿಗ್ಗೆ 10.30ಕ್ಕೆ ಪಟ್ಟಣದ ಶ್ರೀ ಶಿವಕುಮಾರ ಸ್ವಾಮಿ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ ಎಂದು ಪಕ್ಷದ ತಾಲ್ಲೂಕು ಅಧ್ಯಕ್ಷ ತೋ.ಚ. ಅನಂತ ಸುಬ್ಬರಾಯ ಅವರು ತಿಳಿಸಿದ್ದಾರೆ.

ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುವರು. ಜ.24 ರಂದು ಹಾಸನದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡಿರುವ ಸಮಾವೇಶ, ಪಕ್ಷ ಸಂಘಟನೆ, ಮುಂಬರುವ ಚುನಾವಣೆಗೆ ತಯಾರಿ ಕುರಿತು ನಾಯಕರು ಮಾತುಕತೆ ನಡೆಸಲಿದ್ದಾರೆ. ಬೇಲೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರಿದ್ದಾರೆ.


# ಕೆಐಎಡಿಬಿ ಪ್ರದೇಶದಲ್ಲಿ ಜೆಡಿಎಸ್ ಸಮಾವೇಶಕ್ಕೆ ವಿರೋಧ

• ಪ್ರಜೋದಯ ವರದಿ

**ಹಾಸನ:** ಜೆಡಿಎಸ್ ಸಮಾವೇಶಕ್ಕೆ ಅಭಿವೃದ್ಧಿ ಪಡಿಸಲು ನಿಗದಿಪಡಿಸಿರುವ ಜಾಗದಲ್ಲಿ ಅವಕಾಶ ನೀಡದಂತೆ ಒತ್ತಾಯಿಸಿ ಕಾಂಗ್ರೆಸ್ ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ, ವಕ್ತಾರ ದೇವರಾಜೇಗೌಡ ಅವರ ನೇತೃತ್ವದಲ್ಲಿ ರೈತರು ಶುಕ್ರವಾರ ಕೆಐಎಡಿಬಿ ಅಭಿವೃದ್ಧಿ ಅಧಿಕಾರಿಗೆ ಮನವಿ ಸಲ್ಲಿಸಿದರು.

ಅಭಿವೃದ್ಧಿ ಪಡಿಸಿದ ಜಮೀನು ನೀಡುವಂತೆ ರೈತರು ಎಷ್ಟೇ ಮನವಿ ಮಾಡಿದರೂ, ಇದುವರೆಗೂ ಸ್ಪಂದನೆ ಸಿಕ್ಕಿಲ್ಲ. ನ್ಯಾಯಾಲಯದ ಆದೇಶವೂ ಪಾಲನೆ ಮಾಡಿಲ್ಲ. ಈ ನಡುವೆ ಜೆಡಿಎಸ್ ಪಕ್ಷದವರು ಈ ಜಾಗದಲ್ಲಿದ್ದ ಬೆಳೆಯನ್ನು ನಾಶ ಮಾಡಿ ಸಮಾವೇಶ ಮಾಡಲು ಮುಂದಾಗಿದ್ದಾರೆ. ಅದಕ್ಕೆ ನಮ್ಮ ವಿರೋಧವಿದೆ ಎಂದರು.

2007ರಲ್ಲಿ ವ್ಯವಸಾಯ ಜಮೀನನ್ನು ಕೆಐಎಡಿಬಿಯವರು ಭೂ ಸ್ವಾಧೀನ ಮಾಡಿದ್ದು, ಭೂ ಮಾಲೀಕರಿಗೆ ಪರಿಹಾರ ನೀಡಿಲ್ಲ. ಜಮೀನನ್ನು ಅಭಿವೃದ್ಧಿ ಪಡಿಸಿ ಭೂಮಿ ಕಳೆದುಕೊಂಡ ರೈತರಿಗೆ ನಿವೇಶನ ಹಂಚಿಕೆ ಮಾಡಿಲ್ಲ. ಇದರ ವಿರುದ್ಧ ನ್ಯಾಯಾಲಯದ ಮೊರೆ ಹೋಗಿದ್ದು, ಭೂಮಿ ಹಂಚಿಕೆ ಮಾಡುವಂತೆ



ಹಾಗು ಭೂಸ್ವಾಧೀನ ಪ್ರಕ್ರಿಯೆ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದೇವೆ. ನಮ್ಮ ಮನವಿ ಪುರಸ್ಕರಿಸಿರುವ ಹೈಕೋರ್ಟ್, ಅಭಿವೃದ್ಧಿ ಪಡಿಸಿದ ನಿವೇಶನಗಳನ್ನು ರೈತರಿಗೆ ಹಂಚುವಂತೆ ಆದೇಶ ನೀಡಿದೆ ಎಂದು ರೈತರು ತಿಳಿಸಿದರು.

ಭೂಸ್ವಾಧೀನ ಮಾಡಿಕೊಂಡು 19 ವರ್ಷ ಕಳೆದಿದ್ದರೂ ರೈತರಿಗೆ ಯಾವುದೇ ನಿವೇಶನ ನೀಡದೆ ತೊಂದರೆ ಕೊಡುತ್ತಿದ್ದಾರೆಂದು ಆರೋಪಿಸಿದರು. ಈ ವೇಳೆ ತಾಲ್ಲೂಕಿನ ಗವೇನಹಳ್ಳಿ, ಬುಸ್ತೇನಹಳ್ಳಿ, ಕಸ್ತೂರವಳ್ಳಿ, ಆಡುವಳ್ಳಿ, ಬೊಮ್ಮನಾಯಕನಹಳ್ಳಿ, ರಾಜಘಟ್ಟ, ದೊಡ್ಡ ಹೊನ್ನೇನಹಳ್ಳಿ, ಕಾಚನಾಯಕನಹಳ್ಳಿ ಹಾಗು ದೊಡ್ಡಬಸವನಹಳ್ಳಿ ಗ್ರಾಮಸ್ಥರು, ರೈತರು ಇದ್ದರು.

# ಬೆಂಕಿಗೆ ಆಹುತಿಯಾದ ನಂದಿನಿ ಮಿಲ್ಕ್ ಪಾರ್ಲರ್




• ಪ್ರಜೋದಯ ವರದಿ

**ಹಾಸನ:** ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ನಗರದ ಬಸಟ್ಟಿ ಕೊಪ್ಪಲಿನ ನಂದಿನಿ ಮಿಲ್ಕ್ ಪಾರ್ಲರ್ ಬೆಂಕಿಗಾಹುತಿಯಾಗಿರುವ ಘಟನೆ ಗುರುವಾರ ರಾತ್ರಿ ನಡೆದಿದೆ.

ಮಧ್ಯರಾತ್ರಿ ದಟ್ಟ ಹೊಗೆಯಾಡುತ್ತಿದ್ದುದನ್ನು ಕಂಡು ಸಾರ್ವಜನಿಕರು ಅಗ್ನಿ ಶಾಮಕ ಸಿಬ್ಬಂದಿಗೆ ಮಾಹಿತಿ ತಿಳಿಸಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ ಬರುವ ವೇಳೆ ಬೆಂಕಿಯ ಕೆನ್ನಾಲಿಗೆಗೆ ಎಲ್ಲಾ ವಸ್ತುಗಳು ಭಸ್ಮವಾಗಿವೆ. ರೆಫ್ರಿಜರೇಟರ್, ಹಾಲು, ಮೊಸರಿನ ಪ್ಯಾಕೆಟ್, 20ಕ್ಕೂ ಹೆಚ್ಚು ಟ್ರೇಗಳು, ಐಸ್ ಕ್ರಿಂ, ಫ್ಯಾನ್ ಸೇರಿ ಅಂದಾಜು 8 ಲಕ್ಷ ರೂ. ಮೌಲ್ಯದ ಸಾಮಾಗ್ರಿಗಳು ನಷ್ಟಕ್ಕೀಡಾಗಿವೆ. ಶುಕ್ರವಾರ ಬೆಳಿಗ್ಗೆ ಕೆಎಂಎಫ್‌ನ ಮಾರಾಟ ವಿಭಾಗ ಅಧಿಕಾರಿಗಳು ಪರಿಶೀಲಿಸಿದರು. ಮಿಲ್ಕ್ ಪಾರ್ಲರ್ ಮಾಲೀಕ ಚಿರಂತ್ ಅವರು ಮಾತನಾಡಿ, ಗುರುವಾರ ರಾತ್ರಿ 10.30ಕ್ಕೆ ಎಂದಿನಂತೆ ಬಾಗಿಲು ಹಾಕಿಕೊಂಡು ಮನೆಗೆ ತೆರಳಿದ್ದೆವು. ಸಾರ್ವಜನಿಕರ ಮಾಹಿತಿ ಆಧರಿಸಿ ನಾವು ಬರುವ ಮೊದಲೇ ಅಗ್ನಿಶಾಮಕ ಸಿಬ್ಬಂದಿ ದೌಡಾಯಿಸಿದ್ದರು. ಅಷ್ಟರಲ್ಲೇ ಎಲ್ಲವೂ ಸುಟ್ಟು ಕರಕಲಾಗಿದೆ. ಅಂದಾಜು 8 ಲಕ್ಷ ರೂ. ನಷ್ಟ ಸಂಭವಿಸಿದೆ ಎಂದು ಅಳಲು ತೋಡಿಕೊಂಡರು.

## ತಾ.ಪಂ.ನಲ್ಲಿ ತ್ರೈಮಾಸಿಕ ಸಭೆ | ಶಾಸಕ ಬಾಲಕೃಷ್ಣ ವಿರುದ್ಧ ಆಕ್ರೋಶ

# ವಸೂಲಿ ಪದ ಬಳಕೆಗೆ ಕೆಡಿಪಿ ಸದಸ್ಯರ ಕೆಂಡಾಮಂಡಲ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕು ಪಂಚಾಯಿತಿ ಕೆಡಿಪಿ ನಾಮನಿರ್ದೇಶಿತ ಸದಸ್ಯರು ಯಾರ್‍ಯಾರ ಬಳಿ ಎಷ್ಟೆಷ್ಟು ವಸೂಲಿ ಮಾಡುತ್ತಿದ್ದೀರಿ ಎಂಬುವುದರ ಮಾಹಿತಿ ಇದೆ ಎಂಬ ಶಾಸಕ ಸಿ.ಎನ್.ಬಾಲಕೃಷ್ಣ ಅವರ ಹೇಳಿಕೆ ಕೋಲಾಹಲ ಸೃಷ್ಟಿಸಿತು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ (ಕೆಡಿಪಿ) ಸಭೆಯಲ್ಲಿ ಮಾತನಾಡಿದ ಅವರು, ಯಾರ್‍ಯಾರ ಬಳಿ ಎಷ್ಟೆಷ್ಟು ವಸೂಲಿ ಮಾಡುತ್ತಿದ್ದೀರಿ ಎಂಬುದೆಲ್ಲಾ ಗೊತ್ತು. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗು ಮುಖ್ಯಮಂತ್ರಿ ಗಮನಕ್ಕೆ ತರುತ್ತೇನೆಂದು ಆಕ್ರೋಶ ವ್ಯಕ್ತಪಡಿಸಿದರು.

ಆಕ್ಷೇಪ ವ್ಯಕ್ತಪಡಿಸಿದ ಸದಸ್ಯರು, ಶಾಸಕರ ವಿರುದ್ಧ ಮುಗಿಬಿದ್ದರಲ್ಲದೆ ಸಭಾಂಗಣಕ್ಕೆ ನುಗ್ಗಿ ಪ್ರತಿಭಟನೆ ನಡೆಸಿದರು. ಈ ವೇಳೆ ಶಾಸಕರು ಹಾಗು ಸದಸ್ಯರ ನಡುವೆ ವಾಕ್ಸಮರ




ಜೋರಾಯಿತು. ನಂತರ ಅಧಿಕಾರಿಗಳು ಮಧ್ಯ ಪ್ರವೇಶಿಸಿ ಪರಿಸ್ಥಿತಿ ಶಾಂತಗೊಳಿಸಿದರು. ನಂತರ ಬಾಲಕೃಷ್ಣ ಅವರು ಮಾತನಾಡಿ, ತಾಲ್ಲೂಕಿನ ಅಭಿವೃದ್ಧಿ ವಿಚಾರದಲ್ಲಿ ನನ್ನ ಪಾತ್ರ ಪ್ರಮುಖವಾಗಿದೆ. ಎಲ್ಲಾ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿ ದ್ದೇನೆಂದು ಸ್ಪಷ್ಟಪಡಿಸಿದರು.

### ಅಧಿಕಾರಿಗಳ ಓಲೈಕೆ ಎಷ್ಟು ಸರಿ

ಕೆಡಿಪಿ ಸದಸ್ಯರಿಗೆ ಸಭೆಯಲ್ಲಿ ಸರಿಯಾದ ಮಾಹಿತಿ ನೀಡುತ್ತಿಲ್ಲ. ಸರ್ಕಾರದಿಂದ ನೇಮಕ ಗೊಂಡಿರುವ ನಮಗೂ ಸಮಾನ ಗೌರವ ಸಿಗಬೇಕೆಂದು ಸದಸ್ಯರು ಪಟ್ಟು ಹಿಡಿದರು. ಶಾಸಕರು ಅಧಿಕಾರಿಗಳಿಗೆ ಬೆಂಬಲಿಸುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಸದಸ್ಯರು ವಾಗ್ವಾದ ನಡೆಸಿದರು.

ಸದಸ್ಯ ಗುರುಪ್ರಸಾದ್ ಅವರು ಮಾತನಾಡಿ, ತಾಲ್ಲೂಕಿನ ಶಾಲಾ-ಕಾಲೇಜುಗಳಲ್ಲಿ ಗಾಂಜಾ, ಡ್ರಗ್ಸ್ ಘಮಲು ಹೆಚ್ಚಿದೆ. ವಿದ್ಯಾರ್ಥಿಗಳು ವ್ಯಾಸಂಗ ಬಿಟ್ಟು ದುಶ್ಚಟಗಳ ದಾಸರಾಗುತ್ತಿದ್ದಾರೆ. ಶಿಕ್ಷಣ ಹಾಗು ಪೊಲೀಸ್ ಇಲಾಖೆ ಕಣ್ಮುಚ್ಚಿ ಕುಳಿತಿದೆ. ಖಾಸಗಿ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ನಿರಂತರ ಅತ್ಯಾಚಾರದಿಂದ ಮಗುವಿಗೆ ಜನ್ಮ ನೀಡಿದ್ದಾಳೆ. ಶಾಲೆ ವಿರುದ್ಧ ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಪ್ರಶ್ನಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ದೀಪಾ ಅವರು ಮಾತನಾಡಿ, ಪ್ರಕರಣ ಸಂಬಂಧ ದೂರು ದಾಖಲಾಗಿದೆ. ಪ್ರಕರಣ ತನಿಖೆಯ ಹಂತದಲ್ಲಿದ್ದು, ಶೀಘ್ರವೇ ವರದಿ ಕೈ ಸೇರಲಿದೆ. ಈಗಾಗಲೇ ಶಾಲೆಯ ಮುಖ್ಯಸ್ಥರ ಜೊತೆ ಸಭೆ ನಡೆಸಲಾಗಿದೆ. ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

### ಹೋಟೇಲ್ ಮಾಲೀಕರ ಸಭೆ ನಡೆಸಿ

ಪಟ್ಟಣದಲ್ಲಿ ಖಾಸಗಿ ಹೋಟಲ್‌ಗಳ ಪರವಾನಗಿ ನವೀಕರಣ ಗೊಳ್ಳುತ್ತಿಲ್ಲ. ಅಧಿಕಾರಿಗಳು ಶಾಮೀಲಾಗಿ ಹಣ ವಸೂಲಿ ಮಾಡುತ್ತಿದ್ದಾರೆ. ಕೂಡಲೇ ಹೋಟೆಲ್ ಮಾಲೀಕರ ಸಭೆ ಕರೆಯಬೇಕು. ಅಧಿಕಾರಿಗಳು ನಿರ್ಲಕ್ಷ್ಯ ಭಾವನೆಯಿಂದ ಹೊರಬರಬೇಕು. ಯಾವ ವಿಷಯಕ್ಕೆ ಸಂಬಂಧಿಸಿ ಮಾಹಿತಿ ಕೇಳಿದರೂ ಅಧಿಕಾರಿಗಳು ದುರ್ವರ್ತನೆ ಪ್ರದರ್ಶಿಸುತ್ತಾರೆ. ಈ ಬಗ್ಗೆ ಶಾಸಕರು ಅಧಿಕಾರಿಗಳ ಪರವಾಗಿ ಮಾತನಾಡುತ್ತಿರುವುದು ಸರಿಯಲ್ಲವೆಂದು ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಹರೀಶ್, ಸಬ್ ಇನ್ಸಪೆಕ್ಟರ್ ರಘುಪತಿ ಭಟ್, ಪುರಸಭಾ ಮುಖ್ಯಾಧಿಕಾರಿ ಯತೀಶ್, ಕೆಡಿಪಿ ಸದಸ್ಯರಾದ ಕಬ್ಬಾಳು ಮಹೇಶ್, ಸಮೀವುಲ್ಲಾ, ಗ್ಯಾರಂಟಿ ಯೋಜನಾ ಸಮಿತಿ ಅಧ್ಯಕ್ಷ ಪ್ರಕಾಶ್ ಗೌಡ ಇತರರಿದ್ದರು.

# ನರೇಗಾ: ಬಹಿರಂಗ ಚರ್ಚೆಗೆ ಡಿ.ಕೆ.ಶಿ. ಆಹ್ವಾನ

• ಪ್ರಜೋದಯ ವರದಿ

**ಬೆಂಗಳೂರು:** ನರೇಗಾ ಯೋಜನೆ ಹಾಗು ವಿಬಿಜಿ ರಾಮ್ ಜಿ ಯೋಜನೆ ಕುರಿತು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಬಹಿರಂಗ ಚರ್ಚೆಗೆ ಬರಬೇಕೆಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪಂಥಾಹ್ವಾನ ನೀಡಿದರು.

ಶುಕ್ರವಾರ ಮಾತನಾಡಿದ ಅವರು, ಯುಪಿಎ ಸರ್ಕಾರದ ಅವಧಿಯಲ್ಲಿ ನರೇಗಾ ಯೋಜನೆಯಲ್ಲಿ 11 ಲಕ್ಷ ಕೋಟಿ ರೂ. ಅವ್ಯವಹಾರ ನಡೆದಿದೆ ಎಂಬ ಜೋಶಿ ಅವರ ಹೇಳಿಕೆ ಆಧಾರ ರಹಿತ. ಈ ಕುರಿತು ಬಹಿರಂಗ ಚರ್ಚೆಗೆ ಬರಬೇಕು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಸೇರಿ ಯಾರಾದರೂ ಮಾಧ್ಯಮ ವೇದಿಕೆಗೆ ಬಂದು ಚರ್ಚೆ ಮಾಡಲಿ ಎಂದು ಸವಾಲೆಸೆದರು.

ಯೋಜನೆಯಲ್ಲಿ ಅವ್ಯವಹಾರವಾಗಿದ್ದರೆ ಸಿಬಿಐ ತನಿಖೆಗೆ ಒಪ್ಪಿಸಬೇಕು. ತಾಕತ್ತಿದ್ದರೆ ಈಗಲೂ ತನಿಖೆ ಮಾಡಿಸಲಿ, ಜವಾಬ್ದಾರಿಯುತ ಸ್ಥಾನದಲ್ಲಿರುವ ನಾಯಕರು ಇಂತಹ ಆರೋಪ ಮಾಡಲು ಹೇಗೆ ಸಾಧ್ಯವೆಂದು ಪ್ರಶ್ನಿಸಿದರು.

CMYK CMYK CMYK CMYK

# ಕಪಿಲ್ ದೇವ್ ಕಲಿಸಿದ ಸಹನೆಯ ಪಾಠ!

1983ರ ಏಕದಿನ ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿಗಳ ಫೈನಲ್ ಅನ್ನು ನೋಡಿದವರಿಗೆ ಅಥವಾ ಕೇಳಿದವರಿಗೆ ಅಂದು ಜಯದ ಸಂಭವದಲ್ಲಿದ್ದ ಮತ್ತು ಉತ್ತಮವಾಗಿ ಬ್ಯಾಟಿಂಗ್ ಮಾಡುತ್ತಿದ್ದ ವೆಸ್ಟ್ ಇಂಡೀಸ್‌ನ ಬ್ಯಾಟಿಂಗ್ ದೈತ್ಯ ವಿವಿಯನ್ ರಿಚರ್ಡ್ಸ್ ಗಗನಕ್ಕೆ ಚಿಮ್ಮಿದ ಹೊಡೆತ ಮತ್ತು ಆ ಗಗನಮುಖಿ ಚೆಂಡನ್ನು ಹಿಡಿಯಲು ಓಡಿದ ಕಪಿಲ್ ದೇವ್ ರ ಸಾಹಸ ನೆನಪಿರಬಹುದು. ಅಂದು ತಂಡದ ನಾಯಕರಾಗಿದ್ದ ಕಪಿಲ್ ದೇವ್ ನಿಜಕ್ಕೂ ನಾಯಕರಂತೆಯೇ ಭಾರತ ತಂಡವನ್ನು ರಕ್ಷಣೆ ಮಾಡಿ ವಿಶ್ವಕಪ್ ಗೆಲ್ಲುವಂತೆ ಮಾಡಿದರು.

ಇದೆಲ್ಲಾ ಏಕೆ ನೆನಪಾಯಿತು ಅಂದರೆ ಮೊನ್ನೆ ಜನವರಿ 6 ಕಪಿಲ್ ದೇವ್ ಅವರ ಜನ್ಮದಿನ. ಆ ಸಂದರ್ಭದಲ್ಲೇ ನಾನು ಸಾಮಾಜಿಕ ಜಾಲತಾಣವೊಂದರಲ್ಲಿ ಕಪಿಲ್ ಬಗ್ಗೆ ಹರಿದಾಡುತ್ತಿದ್ದ ಬರಹವೊಂದನ್ನು ಕಂಡೆ. ಅದು ಕಪಿಲ್ ದೇವ್ ಅವರನ್ನು ಈಗಲೂ ದೇಶ ಏಕೆ ಅತ್ಯುತ್ತಮ ಆಲ್ ರೌಂಡರ್ ಎಂದು ಪರಿಗಣಿಸುತ್ತದೆ ಎನ್ನುವುದಕ್ಕೆ ಉದಾಹರಣೆಯಾಗಿತ್ತು. ದುರಂತವೆಂದರೆ ಅಷ್ಟೊಂದು ಉತ್ತಮ ಬರಹವನ್ನು ಬರೆದು ಪ್ರಕಟ ಮಾಡಿದ ಆ ಲೇಖಕರ ಹೆಸರೇ ಇರಲಿಲ್ಲ. ಆದರೂ ಆ ಅಜ್ಞಾತ ಲೇಖಕರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ ಆ ಬರಹವನ್ನು ಯಥಾವತ್ತಾಗಿ ಮುದ್ರಿಸುತ್ತಿರುವೆ.

★★★

ಮೂವತ್ತಾರು ವರ್ಷಗಳ ಹಿಂದಿನ ಮಾತು. ಭಾರತ ಇಂಗ್ಲೆಂಡ್ ನಡುವೆ ಲಾರ್ಡ್ಸ್‌ನಲ್ಲಿ ನಡೆದ ಟೆಸ್ಟ್ ಪಂದ್ಯ ಅದು. ಎಡ್ಡಿ ಹೆಮ್ಮಿಂಗ್ಸ್ ಅನ್ನೋ ಅನುಭವಿ ಸ್ಪಿನ್ನರ್ ಬೌಲಿಂಗ್ ಮಾಡ್ತಾ ಇದಾನೆ. ಅವನ ಬಗ್ಗೆ ಆಗೊಂದು ಮಾತು ಹರಿದಾಡ್ತಾ ಇತ್ತು. ಅವ್ನು ಮಹಾನ್ ಚಾಣಾಕ್ಷ ಸ್ಪಿನ್ನರ್. ಫೀಲ್ಡರ್ ಎಲ್ಲಿ ನಿಲ್ಲಿಸುತ್ತಾನೋ ಅಲ್ಲೇ ಕ್ಯಾಚ್ ಕೊಡೋ ಹಾಗೆ ಬ್ಯಾಟರ್‌ನಿಂದ ಹೊಡೆಸ್ತಾನೆ. ಆ ರೀತಿ ಬೌಲಿಂಗ್ ಹಾಕ್ತಾನೆ ಅಂತ.

ನಂಗೆ ಎಂಬತ್ತೇಳರ ವಿಶ್ವಕಪ್ ಸೆಮಿಫೈನಲ್ ಪಂದ್ಯ ನೋಡಿದಾಗ ಆ ನಂಬಿಕೆ ಬಹಳ ಗಟ್ಟಿ ಆಗಿಬಿಟ್ಟಿತ್ತು. ಆ ಸೆಮಿಫೈನಲ್‌ನಲ್ಲಿ ಭಾರತದ ಪರ ಕೊನೆಯ ಆಶಾಕಿರಣ ಅಂದ್ರೆ ಅದು ಕಪಿಲ್ ದೇವ್. ಕಪಿಲ್ ಆಟ ನೋಡೋಕೋಸ್ಕರಾನೇ ನಾನು ಇಂಡಿಯನ್ ಬ್ಯಾಟಿಂಗ್ ನೋಡ್ತಿದ್ದೆ. ಕಪಿಲ್ ಬೌಲಿಂಗಿಗೋಸ್ಕರಾನೇ ಇಂಡಿಯನ್ ಬೌಲಿಂಗ್ ನೋಡ್ತಿದ್ದೆ. ಅವತ್ತು ಸೆಮಿಫೈನಲ್‌ನಲ್ಲಿ ಅಜರುದ್ದೀನ್ ಅರವತ್ತಾಲ್ಕು ಹೊಡೆದು ಗರಿಷ್ಟ ಸ್ಕೋರರ್ ಆಗಿದ್ದರೂ.. ಪಂದ್ಯ ಗೆಲ್ಲೋಕೆ ಇನ್ನೂ ಬಹಳ ರನ್ ಬೇಕಿತ್ತು.

ಇವತ್ತಿನ ಥರದ ಹೊಡಿಬಡಿ ಸ್ಟೈಲಿನ ಕ್ರಿಕೆಟ್ ಅಲ್ಲ ಅದು. ಅವತ್ತು ಒನ್ ಡೇ ಮ್ಯಾಚಲ್ಲಿ ಇನ್ನೂರ ಐವತ್ತು ಟಾರ್ಗೆಟ್ ಅಂದ್ರೆ ಮೌಂಟ್ ಎವರೆಸ್ಟ್ ಥರ ಅನಿಸ್ತಿತ್ತು. ಅಂಥ ಸ್ಕೋರನ್ನ ಬೆನ್ನಟ್ಟೋಕೆ ಹೋಗಿ ಶುರೂಲೇ ಗಾವಸ್ಕರ್ ಔಟ್ ಆಗಿದ್ದ. ಮಿಕ್ಕವರಿಂದಾನೂ ಆಟ ಬರಲಿಲ್ಲ. ಅಜರುದ್ದೀನ್ ಒಂದು ಕಡೆ ನಿಂತು ಆಡಿದ್ದ ಆದ್ರೂ ಮ್ಯಾಚ್ ಗೆಲ್ಲಿಸಬಲ್ಲ ಅಂತ ಅನಿಸ್ತಾ ಇರ್ಲಿಲ್ಲ.

ಇದ್ದದ್ದು ಒಂದೇ ನಂಬಿಕೆ. ಕಪಿಲ್ ಆಡಿ ಗೆಲ್ಲಿಸಿಬಿಡ್ತಾನೆ ಅಂತ. ಯಾಕಂದ್ರೆ ಅದು ಎಂಬತ್ಮೂರರ ವಿಶ್ವಕಪ್ ಪಂದ್ಯದಲ್ಲಿ ಆತನೇ ಹುಟ್ಟಿಸಿದ್ದ ನಂಬಿಕೆ. ಆ ನೂರಾ ಎಪ್ಪತ್ತೈದು ನಾಟೌಟ್ ಅನ್ನೋ ಸ್ಕೋರ್. ಹದಿನೇಳಕ್ಕೆ ಐದು ಅನ್ನೋ ಹಂತದಿಂದ ಆಡಿದ ರೀತಿ ಕಪಿಲ್ ದೇವ್ ಇಡೀ ದೇಶದ ಅಭಿಮಾನಿಗಳ ಪಾಲಿಗೆ ಆಪದ್ಬಾಂಧವ ಅನಿಸಿಬಿಟ್ಟಿದ್ದ.

ಆ ನಂತರ ಹಲವಾರು ಬಾರಿ ಕಪಿಲ್ ತನ್ನ ಬಿಡುಬೀಸು ಆಟದಿಂದ ಪಂದ್ಯಗಳ ಗತಿ ಬದಲಿಸಿದ್ದ. ಅವತ್ತು ಸೆಮಿಫೈನಲ್ ಪಂದ್ಯದಲ್ಲಿ ಕಪಿಲ್ ಆಡೋಕೆ ಬಂದಾಗ ಇನ್ನೂ ನೂರಾ ಮೂವತ್ತು ರನ್ ಬೇಕು ಗೆಲ್ಲೋದಕ್ಕೆ. ಒಂದು ಕಡೆ ಅಜರ್ ಇದ್ದ. ಕಪಿಲ್ ಬಂದವ್ನೇ ಬಿರುಗಾಳಿಯ ಬ್ಯಾಟಿಂಗ್ ಶುರು ಮಾಡಿಬಿಟ್ಟ. ಭಾರತಕ್ಕೆ ಗೆಲ್ಲೋ ಭರವಸೆ. ಇಪ್ಪತ್ತೆರಡು ಬಾಲ್ ಗಳಲ್ಲಿ ಮೂವತ್ತು ರನ್. ಮೂರು ಫೋರ್..!


**» ನಂಗೆ ಒಂದು ಕಡೆ ಭಯ. ಈಗ ವಿಕೆಟ್ ತೆಗೆದೇಬಿಡ್ತಾನೇನೋ. ಕಪಿಲ್ ದೇವ್ ಕ್ಯಾಚ್ ಕೊಟ್ಟು ಬಿಡ್ತಾನೋ ಏನೋ ಅಂತ. ಮೊದಲ ಎರಡು ಎಸೆತ ಡಾಟ್ ಮಾಡ್ತಾನೆ ಕಪಿಲ್. ಇನ್ನು ನಾಲ್ಕು ಎಸೆತ ಇದೆ. ಮೂರನೇ ಬಾಲ್.. ಸಿಕ್ಸ್.. ಲಾಂಗ್ ಆನ್ ಮೇಲೆ. ನಾಲ್ಕನೇ ಬಾಲ್.... ಮತ್ತೊಂದು ಸಿಕ್ಸ್. ಅದೇ ಲಾಂಗ್ ಆನ್ ಮೇಲೆ. ಐದನೇ ಬಾಲ್.. ಅದೇ ಥರದ ಬಾಲ್.. ಅದೇ ಥರದ ರಿಸಲ್ಟ್... ಲಾಂಗ್ ಆನ್ ಸಿಕ್ಸ್...!**

ಅವತ್ತಿಗೆ ಅದು ಚಂಡಮಾರುತದ ಬ್ಯಾಟಿಂಗ್ ಅನಿಸ್ತಿತ್ತು. ಇಂಥ ಸಂದರ್ಭದಲ್ಲಿ ಕ್ಯಾಪ್ಟನ್ ಮೈಕ್ ಗ್ಯಾಟಿಂಗ್ ಚೆಂಡನ್ನ ಎಡ್ಡೀ ಹೆಮ್ಮಿಂಗ್ಸ್ ಕೈಗೆ ಕೊಡ್ತಾನೆ. ಎಡ್ಡೀ ಹೆಮ್ಮಿಂಗ್ಸ್ ಅದೇ ಕ್ಯಾಪ್ಟನ್ ಮೈಕ್ ಗ್ಯಾಟಿಂಗನ್ನ.. ಹೋಗಿ ಮಿಡ್ ವಿಕೆಟ್ ಬೌಂಡರಿಯಲ್ಲಿ ನಿಂತ್ಕೋ ಅಂತ ಕಳಿಸ್ತಾನೆ.

ಎಡ್ಡಿ ಹೆಮ್ಮಿಂಗ್ಸ್ ಎಸೆದ ಚೆಂಡು... ಕಪಿಲ್ ದೇವ್ ಮಿಡ್ ವಿಕೆಟ್ ಬೌಂಡರಿಯತ್ತ ಗಾಳಿಯಲ್ಲಿ ಹೊಡೀತಾನೆ. ಚೆಂಡಿಗೆ ಕಾಯ್ತಾ ಇದ್ದ ಮೈಕ್ ಗ್ಯಾಟಿಂಗ್‌ನ ಕೈ ಸೇರತ್ತೆ. ಆ ಕ್ಷಣ ಎಂಬತ್ತೇಳರ ವಿಶ್ವಕಪ್ ಕನಸು ಭಗ್ನಗೊಂಡಿತ್ತು. ಮೂವತ್ತೋ ಮೂವತ್ತೈದೋ ರನ್‌ಗಳಿಂದ ಭಾರತ ಸೋತಿತ್ತು. ಆಗಿಂದ ನಂಗೆ ಈ ಎಡ್ಡೀ ಹೆಮ್ಮಿಂಗ್ಸ್ ಅಂದ್ರೆ ಏನೋ ಸಿಟ್ಟು ಜೊತೆಗೊಂದು ಭಯ. ಇವ್ನಿಗೆ ಕಪಿಲ್ ದೇವ್ ಒಂದ್ಸಲನಾದ್ರೂ ಚಚ್ಚಿ ಬುದ್ಧಿ ಕಲಿಸ್ಲೇಬೇಕು. ಸೇಡು ತೀರಿಸ್ಕೊಳ್ಳೇಬೇಕು ಅಂತ ತುಂಬ ಅನಿಸ್ತಾನೇ ಇತ್ತು.

ಮೂರು ವರ್ಷದ ನಂತರ ಅಂಥದ್ದೊಂದು ಸಂದರ್ಭ ಬಂತು. 1990ರಲ್ಲಿ ಭಾರತ ಇಂಗ್ಲೆಂಡ್ ಪ್ರವಾಸಕ್ಕೆ ಹೋಯ್ತು. ಆದರೆ ಭಾರತದ ಪರ್ಫಾರ್ಮೆನ್ಸ್ ಅದ್ಭುತವಾಗೇನೂ ಇರ್ಲಿಲ್ಲ. ಭಾರತ ಆಗೆಲ್ಲ ಆಸ್ಟ್ರೇಲಿಯಾ, ಇಂಗ್ಲೆಂಡ್, ನ್ಯೂಜಿಲೆಂಡ್, ವೆಸ್ಟಿಂಡೀಸ್ ಈ ನಾಲ್ಕು ದೇಶಗಳಲ್ಲಿ ಎಲ್ಲೇ ಹೋದ್ರೂ ಹೊಡೆಸ್ಕೊಂಡ್ ಬಂದ್ರು ಅಂತಾನೇ ಕ್ರಿಕೆಟ್ ಪ್ರೇಮಿಗಳು ಫಿಕ್ಸಾಗಿಬಿಡ್ತಿದ್ರು. ಈ ಟೆಸ್ಟ್‌ನಲ್ಲೂ ಹಾಗೆಯೇ ಇತ್ತು ಭಾರತದ ಪರಿಸ್ಥಿತಿ.

ಇಂಗ್ಲೆಂಡ್ ಆರ್ನೂರಾ ಐವತ್ಮೂರು ಹೊಡೆದಿದೆ. ಪ್ರತಿಯಾಗಿ ಅವತ್ತೂ ಅಷ್ಟೇ ಅಜರ್ ಒಬ್ಬನೇ ಒಳ್ಳೇ ಆಟ ಆಡಿದ್ದು. ಶತಕ ಹೊಡೆದು ಔಟಾಗಿದಾನೆ. ಐದೋ ಆರೋ ವಿಕೆಟ್ ಹೋದಮೇಲೆ ಬಂದ ಕಪಿಲ್ ಒನ್ ಡೇ ಮಾದರಿಯಲ್ಲಿ ಬ್ಯಾಟ್ ಬೀಸಲು ಶುರು ಮಾಡೇಬಿಟ್ಟ. ಒಂದು ಕಡೆ ವಿಕೆಟ್ ಬೀಳ್ತಾ ಇದೆ. ಕಪಿಲ್ ಅಬ್ಬರ ನಿಲ್ತಾ ಇಲ್ಲ. ಆದರೂ ಫಾಲೋ ಆನ್ ಗುರಿ ಕೂಡ ದೂರ ದೂರ..! ನಾನೂರಾ ಐವತ್ನಾಲ್ಕಕ್ಕೆ ಫಾಲೋ ಆನ್ ತಪ್ಪುತ್ತೆ. ಭಾರತದ ಸ್ಕೋರ್ 393/6. ಕಪಿಲ್ ಇದಾನೆ. ಅರವತ್ತೊಂದು ಹೊಡೀಬಹುದಾ ಅಂತ ಅನ್ಕೊಳ್ಳೋ ಹೊತ್ತಿಗೆ. ಏಳನೇ ವಿಕೆಟ್ ಬಿತ್ತು.393/7





ಕಿರಣ್ ಮೋರೆ ಎಂಬ ಜೋಕರ್ ಕೀಪರ್ ಬಂದು ಕಪಿಲ್ ಗೆ ಸಾಥ್ ಕೊಟ್ಟ. ಮೂವತ್ತು ಎಸೆತ ನಿಂತ. ಆಗೆಲ್ಲ ಕಪಿಲ್ ಗೆ ಒಳ್ಳೇ ಪಾರ್ಟ್ನರ್ ಅಂದ್ರೆ ಕಿರಣ್ ಮೋರೆನೇ.! ಅಷ್ಟರಲ್ಲಿ ಮತ್ತೆ ವಿಕೆಟ್ ಬಿತ್ತು. ನಾನೂರಾ ಮೂವತ್ತಕ್ಕೆ ಎಂಟು! ನಾನೂರಾ ಮೂವತ್ತಕ್ಕೆ ಇನ್ನೊಂದು. 430/9. ಈಗ ಇರೋದು ಕೊನೆಯ ವಿಕೆಟ್. ಒಂದು ಬದೀಲಿ ನರೇಂದ್ರ ಹಿರ್ವಾನಿ. ಆತನಿಗೆ ಒಂದೇ ಒಂದು ಎಸೆತ ಕೂಡ ಎದುರಿಸೋಕೆ ಬರಲ್ಲ. ಇನ್ನೊಂದು ಬದೀಲಿ ಕಪಿಲ್ ದೇವ್. ಫಾಲೋ ಆನ್ ತಪ್ಪಿಸಲು ಬೇಕಾಗಿರೋದು ಇಪ್ಪತ್ನಾಲ್ಕು ರನ್. ಎಡ್ಡೀ ಹೆಮ್ಮಿಂಗ್ಸ್ ಬೌಲಿಂಗ್.

ನಂಗೆ ಒಂದು ಕಡೆ ಭಯ. ಈಗ ವಿಕೆಟ್ ತೆಗೆದೇಬಿಡ್ತಾನೇನೋ. ಕಪಿಲ್ ದೇವ್ ಕ್ಯಾಚ್ ಕೊಟ್ಟು ಬಿಡ್ತಾನೋ ಏನೋ ಅಂತ. ಮೊದಲ ಎರಡು ಎಸೆತ ಡಾಟ್ ಮಾಡ್ತಾನೆ ಕಪಿಲ್. ಇನ್ನು ನಾಲ್ಕು ಎಸೆತ ಇದೆ. ಮೂರನೇ ಬಾಲ್.. ಸಿಕ್ಸ್.. ಲಾಂಗ್ ಆನ್ ಮೇಲೆ. ನಾಲ್ಕನೇ ಬಾಲ್.... ಮತ್ತೊಂದು ಸಿಕ್ಸ್. ಅದೇ ಲಾಂಗ್ ಆನ್ ಮೇಲೆ. ಐದನೇ ಬಾಲ್.. ಅದೇ ಥರದ ಬಾಲ್.. ಅದೇ ಥರದ ರಿಸಲ್ಟ್... ಲಾಂಗ್ ಆನ್ ಸಿಕ್ಸ್...! ಕಪಿಲ್‌ದೊಂದು ಸ್ಟೈಲ್ ಇತ್ತು. ಬೌಲರ್ ಬೌಲ್ ಮಾಡೋಕ್ ಮೊದ್ಲು ಒಂದ್ಸಲ ಫೀಲ್ಡರ್‌ಗಳು ಎಲ್ಲೆಲ್ಲಿ ಇದಾರೆ ಅಂತ ಕೈ ಮತ್ತು ಕಣ್ಗಳಲ್ಲಿ ಲೆಕ್ಕ ಹಾಕೋದು.

ಹಾಗೊಂದ್ಸಲ ನೋಡ್ಕೊಳ್ತಾನೆ. ಆರನೇ ಬಾಲ್‌ಗೆ ರೆಡಿ ಆಗ್ತಾನೆ. ಆರನೇ ಎಸೆತ.. ಅದೇ ರೀತಿಯ ಆಫ್ ಸ್ಪಿನ್ ಬಾಲಿಗೆ... ಲಾಂಗ್ ಆನ್ ಮೇಲೆ ಇನ್ನೊಂದು ಭರ್ಜರಿ ಸಿಕ್ಸರ್..! ನಂಗೇ ಇಷ್ಟು ಕೋಪ ಇತ್ತು, ಎಂಬತ್ತೇಳರಲ್ಲಿ ತಂಡದ ನಾಯಕ ಆಗಿದ್ದ ಕಪಿಲ್ ಗೆ ಇನ್ನೆಷ್ಟು ಕೋಪ ಇದ್ದಿರಬೇಡ. ಅವತ್ತು ಔಟ್ ಆದ ರೀತಿಯ ಬಗ್ಗೆ. ಕಪಿಲ್ ಅಕ್ಷರಶಃ ಎಂಬತ್ತೇಳರ ಸೇಡು ತೀರಿಸಿಕೊಂಡಿದ್ದ. ಕೇವಲ ನಾಲ್ಕೇ ನಾಲ್ಕು ಎಸೆತಗಳಲ್ಲಿ ನಾಲ್ಕು ಸಿಕ್ಸರ್ ಮೂಲಕ ಫಾಲೋ ಆನ್ ತೀರಿಸಿದ್ದ.

ನಂಗಿನ್ನೂ ನೆನಪಿದೆ if u need 24 to save follow on.. why wouldnt u get it in four deliveries..! only kapil dev can do it... only kapil dev..! ಕಪಿಲ್ ದೇವ್ ಮಾತ್ರ ಇಂಥ ಆಟ ಆಡಬಲ್ಲ.. ಓನ್ಲಿ ಕಪಿಲ್ ದೇವ್..!

ಲಾರ್ಡ್ಸ್ ಪೆವಿಲಿಯನ್ ಬಾಲ್ಕನಿಯಲ್ಲಿ ನಿಂತಿದ್ದ ಅಸಹಾಯಕ ಭಾರತ ತಂಡ ಕಪಿಲ್ ವೀರಾವೇಶ ಕಂಡು ಚಪ್ಪಾಳೆ ತಟ್ಟುತ್ತಾ ಇತ್ತು. ಮರು ಓವರ್ ನ ಮೊದಲ ಎಸೆತದಲ್ಲೇ ನರೇಂದ್ರ ಹಿರ್ವಾನಿ ಬೌಲ್ಡ್ ಆಗಿದ್ದ. ಇನ್ನಿಂಗ್ಸ್ ಮುಗಿದಿತ್ತು.

ಆದರೆ ಕಪಿಲ್ ದೇವ್ ಮತ್ತೆ ಭಾರತ ಬ್ಯಾಟಿಂಗ್‌ಗೆ ಇಳಿಯೋ ಅಪಾಯದಿಂದ ಪಾರುಮಾಡಿದ್ದ. ಇನ್ನಿಂಗ್ಸ್ ಸೋಲು ತಪ್ಪಿಸಿದ್ದ. ಅವತ್ತು ಎಡ್ಡೀ ಹೆಮ್ಮಿಂಗ್ಸ್ ಮೇಲಿನ ಕೋಪ ಇಳಿದಿತ್ತು. ಕಪಿಲ್ ಮೇಲಿನ ಅಭಿಮಾನ ಮತ್ತಷ್ಟು ಪಟ್ಟು ಹೆಚ್ಚಿತ್ತು. ಹೆಮ್ಮಿಂಗ್ಸ್ ಅಂಥಾ ಬೌಲರ್ ಏನಲ್ಲ ಅನ್ನೋದೂ ಆಗ ಅರ್ಥ ಆಗಿತ್ತು. ಅವನ ದಾಖಲೆಗಳೂ ಅಷ್ಟೇನೂ ಇರಲಿಲ್ಲ ಅಂತ ಅಷ್ಟೊತ್ತಿಗೆ ಓದಲು ಸಿಕ್ತಾ ಇದ್ದ ರಾಜುಪತ್ರಿಕೆಯಿಂದ ತಿಳಿದಿತ್ತು.

ಅಂದು ಹೆಮ್ಮಿಂಗ್ಸ್ ಹಾಕಿದ ಎಸೆತಗಳು ಸಿಕ್ಸ್ ಹೊಡೆಯೋಕೆ ಹೇಳಿ ಮಾಡಿಸಿದಂಥ ಎಸೆತಗಳಾಗಿದ್ವು. ಆ ಪರಿಸ್ಥಿತಿಯಲ್ಲಿ ಯಾವುದೇ ಬ್ಯಾಟರ್ ಆಗಿದ್ದರೂ ರಿಸ್ಕ್ ತಗೊಬೇಕಾಗ್ತಿತ್ತೊ ಏನೋ. ಆದರೆ ಬೇರೊಬ್ಬ ಬ್ಯಾಟರ್ ಇದ್ದಿದ್ರೆ ಐದು ಬಾಲ್ ಕುಟುಕಿ ಆರನೇ ಬಾಲ್ ಸಿಂಗಲ್ ತಗೊಂಡು ಇನ್ನೊಂದು ಹತ್ತು ಓವರ್ ಆಡೋ ಪ್ರಯತ್ನ ಮಾಡ್ತಿದ್ದ. ಕೊನೆಗೂ ಫಾಲೋ ಆನ್ ತಪ್ಪಿಸ್ಕೊಳೋದಕ್ಕೆ ಆಗ್ತಾ ಇರ್ಲಿಲ್ಲ. ಆದರೆ ಧೈರ್ಯಂ ಸರ್ವತ್ರ ಸಾಧನಂ ಅನ್ನೋ ಹಾಗೆ ಕಪಿಲ್ ಅವತ್ತು ನಾಲ್ಕೇ ಎಸೆತದಲ್ಲಿ ಫಾಲೋ ಆನ್ ತಪ್ಪಿಸುವ ನಾಲ್ಕು ಸಿಕ್ಸರ್ ಸಿಡಿಸಿದ್ದ.

ಕಪಿಲ್ ದೇವ್ ಹ್ಯಾಶ್ ಟ್ಯಾಗ್ ಜತೆ ಈಗ ಸೋಷಿಯಲ್ ಮೀಡಿಯಾ ರೀಲ್‌ಗಳಲ್ಲಿ ಪದೇಪದೆ ಕಪಿಲ್ ದೇವ್‌ನ ಆ ನಾಲ್ಕು ಸಿಕ್ಸರ್ ವಿಡಿಯೋಗಳು ಸಿಕ್ತಾನೇ ಇರ್ತವೆ. ಈಗಿನ ಕಾಲದವರಿಗೆ ಅದು ರೋಮಾಂಚನ ಮೂಡಿಸೋದು ಡೌಟ್. ಆದರೆ ಅಂದು ಟಿವಿ ಅಪರೂಪ.. ಕ್ರಿಕೆಟ್ ಇಂದಿನಷ್ಟಿರಲಿಲ್ಲ. ಸಿಕ್ಸು ಫೋರುಗಳು ಆಗೊಂದು ಈಗೊಂದು ಎಂಬಂತೆ ಹೊಡೆಯುವ ಏಟುಗಳಾಗಿದ್ದವು.

ಆಗ ಇದ್ದವ ಕಪಿಲ್ ದೇವ್. ಭಾರತದಲ್ಲಿ ಕಪಿಲ್‌ನಂಥ ಶ್ರೇಷ್ಠ ಕ್ರಿಕೆಟಿಗ ಇಲ್ಲಿಯತನಕ ಬರಲೇ ಇಲ್ಲ. ಅರ್ಧ ಶತಮಾನವೇ ಕಳೆದುಹೋಯ್ತು. ಮುಂದೆಯೂ ಬರಲಿಕ್ಕಿಲ್ಲ. ಜನವರಿ ಆರನೇ ತಾರೀಖು ಹುಟ್ಟಿದ್ದ ಕಪಿಲ್, ತನ್ನ ಮೊದಲ ರನ್‌ಗಳನ್ನೂ ಸಿಕ್ಸ್ ಮೂಲಕವೇ ಗಳಿಸಿದ್ದನಂತೆ. ಚಿಕ್ಕವನಿದ್ದಾಗ ಕಪಿಲ್ ಮತ್ತು ನಂಬರ್ ಆರರ ನಂಟಿನ ಬಗ್ಗೆ ಸ್ಪೋರ್ಟ್ಸ್ ಸ್ಟಾರ್ ಪತ್ರಿಕೆಯಲ್ಲೇನೋ ಓದಿದ್ದ ನೆನಪು.

## ಎಂಬತ್ತೇಳರ ವಿಶ್ವಕಪ್...

- ಎಂಬತ್ತೇಳರ ವಿಶ್ವಕಪ್ ಸೆಮಿಫೈನಲ್ ಪಂದ್ಯ ನೋಡಿದಾಗ ಆ ನಂಬಿಕೆ ಬಹಳ ಗಟ್ಟಿ ಆಗಿಬಿಟ್ಟಿತ್ತು.
- ಆ ಸೆಮಿಫೈನಲ್‌ನಲ್ಲಿ ಭಾರತದ ಪರ ಕೊನೆಯ ಆಶಾಕಿರಣ ಅಂದ್ರೆ, ಅದು ಕಪಿಲ್ ದೇವ್.
- ಕಪಿಲ್ ಆಟ ನೋಡೋಕೋಸ್ಕರಾನೇ ನಾನು ಇಂಡಿಯನ್ ಬ್ಯಾಟಿಂಗ್ ನೋಡ್ತಿದ್ದೆ.
- ಕಪಿಲ್ ಬೌಲಿಂಗಿಗೋಸ್ಕರಾನೇ ಇಂಡಿಯನ್ ಬೌಲಿಂಗ್ ನೋಡ್ತಿದ್ದೆ. ಅವತ್ತು ಸೆಮಿಫೈನಲ್‌ನಲ್ಲಿ ಅಜರುದ್ದೀನ್ ಅರವತ್ತಾಲ್ಕು ಹೊಡೆದು ಗರಿಷ್ಟ ಸ್ಕೋರರ್ ಆಗಿದ್ದರೂ..
- ಪಂದ್ಯ ಗೆಲ್ಲೋಕೆ ಇನ್ನೂ ಬಹಳ ರನ್ ಬೇಕಿತ್ತು.
- ಇವತ್ತಿನ ಥರದ ಹೊಡಿಬಡಿ ಸ್ಟೈಲಿನ ಕ್ರಿಕೆಟ್ ಅಲ್ಲ ಅದು.
- ಅವತ್ತು ಒನ್ ಡೇ ಮ್ಯಾಚಲ್ಲಿ ಇನ್ನೂರ ಐವತ್ತು ಟಾರ್ಗೆಟ್ ಅಂದ್ರೆ, ಮೌಂಟ್ ಎವರೆಸ್ಟ್ ಥರ ಅನಿಸ್ತಿತ್ತು.
- ಅಂಥ ಸ್ಕೋರನ್ನ ಬೆನ್ನಟ್ಟೋಕೆ ಹೋಗಿ ಶುರೂಲೇ ಗಾವಸ್ಕರ್ ಔಟ್ ಆಗಿದ್ದ. ಮಿಕ್ಕವರಿಂದಾನೂ ಆಟ ಬರಲಿಲ್ಲ.
- ಅಜರುದ್ದೀನ್ ಒಂದು ಕಡೆ ನಿಂತು ಆಡಿದ್ದ ಆದ್ರೂ ಮ್ಯಾಚ್ ಗೆಲ್ಲಿಸಬಲ್ಲ ಅಂತ ಅನಿಸ್ತಾ ಇರ್ಲಿಲ್ಲ.
- ಇದ್ದದ್ದು ಒಂದೇ ನಂಬಿಕೆ. ಕಪಿಲ್ ಆಡಿ ಗೆಲ್ಲಿಸಿಬಿಡ್ತಾನೆ ಅಂತ. ಯಾಕಂದ್ರೆ, ಅದು ಎಂಬತ್ಮೂರರ ವಿಶ್ವಕಪ್ ಪಂದ್ಯದಲ್ಲಿ ಆತನೇ ಹುಟ್ಟಿಸಿದ್ದ ನಂಬಿಕೆ.
- ಆ ನೂರಾ ಎಪ್ಪತ್ತೈದು ನಾಟೌಟ್ ಅನ್ನೋ ಸ್ಕೋರ್.
- ಹದಿನೇಳಕ್ಕೆ ಐದು ಅನ್ನೋ ಹಂತದಿಂದ ಆಡಿದ ರೀತಿ ಕಪಿಲ್ ದೇವ್ ಇಡೀ ದೇಶದ ಅಭಿಮಾನಿಗಳ ಪಾಲಿಗೆ ಆಪದ್ಬಾಂಧವ ಅನಿಸಿಬಿಟ್ಟಿದ್ದ.
- ಆ ನಂತರ ಹಲವಾರು ಬಾರಿ ಕಪಿಲ್ ತನ್ನ ಬಿಡುಬೀಸು ಆಟದಿಂದ ಪಂದ್ಯಗಳ ಗತಿ ಬದಲಿಸಿದ್ದ.
- ಅವತ್ತು ಸೆಮಿಫೈನಲ್ ಪಂದ್ಯದಲ್ಲಿ ಕಪಿಲ್ ಆಡೋಕೆ ಬಂದಾಗ ಇನ್ನೂ ನೂರಾ ಮೂವತ್ತು ರನ್ ಬೇಕು ಗೆಲ್ಲೋದಕ್ಕೆ.
- ಒಂದು ಕಡೆ ಅಜರ್ ಇದ್ದ. ಕಪಿಲ್ ಬಂದವ್ನೇ ಬಿರುಗಾಳಿಯ ಬ್ಯಾಟಿಂಗ್ ಶುರು ಮಾಡಿಬಿಟ್ಟ.
- ಭಾರತಕ್ಕೆ ಗೆಲ್ಲೋ ಭರವಸೆ. ಇಪ್ಪತ್ತೆರಡು ಬಾಲ್‌ಗಳಲ್ಲಿ ಮೂವತ್ತು ರನ್. ಮೂರು ಫೋರ್..!


## 10-01-2026 ದಿನ ಭವಿಷ್ಯ



**ಮೇಷ:** ಯೋಗ ಮತ್ತು ಧ್ಯಾನ ನೀವು ಒಳ್ಳೆಯ ದೇಹರಚನೆ ಕಾಯ್ದುಕೊಳ್ಳಲು ಮತ್ತು ಮಾನಸಿಕವಾಗಿ ಸದೃಢವಾಗಿರಲು ಸಹಾಯ ಮಾಡುತ್ತದೆ. ಇಂದು ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಕಂಡುಬರುತ್ತಿದೆ. ಇದರಿಂದ ನೀವು ತುಂಬಾ ಸಂತೋಷಪಡುತ್ತೀರಿ. ನೀವು ನಿಮ್ಮ ಗುರಿಗಳನ್ನು ಸುಲಭವಾಗಿ ಸಾಧಿಸುತ್ತೀರಿ.



**ವೃಷಭ:** ಸ್ನೇಹಿತರಿಂದ ಒಂದು ವಿಶೇಷ ಅಭಿನಂದನೆ ಸಂತೋಷದ ಮೂಲವಾಗುತ್ತದೆ. ಇದೇಕೆಂದರೆ ನೀವು ನಿಮ್ಮ ಜೀವನವನ್ನು ಮರಗಳಂತೆ ಮಾಡಿಕೊಳ್ಳುತ್ತೀರಿ-ಅವುಗಳು ತಾವು ಸೂರ್ಯನಡಿ ನಿಂತು ಶಾಖದ ಬೇಗೆ ತಡೆದುಕೊಂಡು ಇತರರಿಗೆ ನೆರಳು ನೀಡುತ್ತವೆ. ನಿಮ್ಮ ಯಾವುದೇ ಹಳೆಯ ಸ್ನೇಹಿತ ಇಂದು ವ್ಯಾಪಾರದಲ್ಲಿ ಲಾಭ ಗಳಿಸಲು ನಿಮಗೆ ಸಲಹೆ ನೀಡಬಹುದು.



**ಮಿಥುನ:** ನೀವು ಕೆಲವು ಗಂಭೀರ ತೊಂದರೆಗಳನ್ನು ಎದುರಿಸಲು ಸಾಧ್ಯತೆಯಿರುವುದರಿಂದ ನಿಮ್ಮನ್ನು ನಿಯಂತ್ರಿಸಿಕೊಳ್ಳಿ. ವಿಶೇಷವಾಗಿ ಸಣ್ಣ ಹುಚ್ಚಲ್ಲದೇ ಬೇರೇನೂ ಅಲ್ಲದ ನಿಮ್ಮ ಕೋಪವನ್ನು ನಿಯಂತ್ರಿಸಿಕೊಳ್ಳಿ. ಇಂದು ನಿಮ್ಮ ಯಾವುದೇ ಚಲಿಸಬಲ್ಲ ಆಸ್ತಿಯನ್ನು ಕದಿಯಬಹುದು ಆದ್ದರಿಂದ ಸಾಧ್ಯವಾದಷ್ಟು ಅದರ ಬಗ್ಗೆ ಗಮನ ಹರಿಸಿ.



**ಕರ್ಕಾಟಕ:** ಕೆಲವು ಅನಿವಾರ್ಯ ಸಂದರ್ಭಗಳು ನಿಮಗೆ ಅಹಿತಕರವೆನಿಸಬಹುದು. ಆದರೆ ನೀವು ನಿಮ್ಮ ಸಮತೋಲನ ಕಾಯ್ದುಕೊಳ್ಳಬೇಕು ಮತ್ತು ಪರಿಸ್ಥಿತಿಯನ್ನು ನಿಭಾಯಿಸಲು ತಕ್ಷಣವೇ ಪ್ರತಿಕ್ರಿಯಿಸಬಾರದು. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ಕುಟುಂಬದ ಸದಸ್ಯರೊಂದಿಗೆ ಕೆಲವು ವಿಶ್ರಾಂತಿಯ ಕ್ಷಣಗಳನ್ನು ಕಳೆಯಿರಿ.



**ಸಿಂಹ:** ಬಸುರಿಯು ನೆಲದ ಮೇಲೆ ನಡೆದುಕೊಂಡು ಹೋಗುವಾಗ ವಿಶೇಷ ಕಾಳಜಿ ವಹಿಸಬೇಕು. ಹಣಕಾಸಿನಲ್ಲಿ ಸುಧಾರಣೆ ದೀರ್ಘಕಾಲದಿಂದ ಬಾಕಿಯಿರುವ ನಿಮ್ಮ ಬಾಕಿಗಳು ಮತ್ತು ಬಿಲ್ಲುಗಳನ್ನು ಪಾವತಿಸುವುದನ್ನು ಅನುಕೂಲಕರವಾಗಿಸುತ್ತದೆ. ನಿಮ್ಮ ಮಕ್ಕಳ ಜೊತೆ ಒಂದು ಆರೋಗ್ಯಕರ ಸಂಬಂಧವನ್ನು ಉತ್ತೇಜಿಸಿ.




**ಕನ್ಯಾ:** ವಿಧಿಯನ್ನು ಆಧರಿಸದಿರಿ ಮತ್ತು ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದ್ದು ಇದು ಎಂದಿಗೂ ತಾನಾಗಿಯೇ ನಿಮ್ಮ ಬಳಿ ಬರುವುದಿಲ್ಲ. ನಿಮ್ಮ ತೂಕವನ್ನು ನಿಯಂತ್ರಿಸಲು ಮತ್ತು ನಿಮ್ಮ ಆರೋಗ್ಯವನ್ನು ಪುನಃ ಪಡೆಯಲು ವ್ಯಾಯಾಮ ಮಾಡಲು ಇದು ಒಳ್ಳೆಯ ಸಮಯ.



**ತುಲಾ:** ವಿಜಯೋತ್ಸವವು ನಿಮಗೆ ಪ್ರಚಂಡ ಸಂತೋಷವನ್ನು ನೀಡುತ್ತದೆ. ನಿಮ್ಮ ಸಂತೋಷವನ್ನು ಅನುಭವಿಸಲು ನೀವಿದನ್ನು ನಿಮ್ಮ ಸ್ನೇಹಿತರ ಜೊತೆ ಹಂಚಿಕೊಳ್ಳಬಹುದು. ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು.



**ವೃಶ್ಚಿಕ:** ಅದೃಷ್ಟವನ್ನು ಅವಲಂಬಿಸಬೇಡಿ, ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದೆ. ಆರ್ಥಿಕವಾಗಿ ಇಂದು ನೀವು ಸಾಕಷ್ಟು ಬಲವಾಗಿ ಕಾಣುವಿರಿ, ಗ್ರಹ ಮತ್ತು ನಕ್ಷತ್ರಗಳ ಚಲನೆಯಿಂದ ಇಂದು ನಿಮಗಾಗಿ ಹಣವನ್ನು ಸಂಪಾದಿಸುವ ಅನೇಕ ಅವಕಾಶಗಳು ಉಂಟಾಗುತ್ತವೆ. ಕುಟುಂಬದ ಸದಸ್ಯರೊಂದಿಗೆ ಕೆಲವು ವಿಶ್ರಾಂತಿಯ ಕ್ಷಣಗಳನ್ನು ಕಳೆಯಿರಿ.




**ಧನು:** ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ತಮ್ಮ ಹಣವನ್ನು ಇನ್ನೊಬ್ಬರಿಗೆ ನೀಡಲು ಇಷ್ಟಪಡುವುದಿಲ್ಲ ಆದರೆ ಇಂದು ನೀವು ಅಗತ್ಯವಿರುವವರಿಗೆ ಹಣವನ್ನು ಕೊಟ್ಟು ವಿಶ್ರಾಂತಿಯನ್ನು ಅನುಭವಿಸುವಿರಿ. ಅಧ್ಯಯನಗಳನ್ನು ತಪ್ಪಿಸಿ ಹೊರಾಂಗಣ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಿಕೆ ನಿಮ್ಮ ಪೋಷಕರಿಗೆ ಕೋಪ ಬರಿಸಬಹುದು.



**ಮಕರ:** ಧ್ಯಾನ ಪರಿಹಾರ ತರುತ್ತದೆ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ. ಆದರೆ ಹಾಗೆ ಮಾಡಿದಲ್ಲಿ ನೀವು ವಿಷಾದಿಸುತ್ತೀರಿ. ಮನೆಯ ಸದಸ್ಯರೊಬ್ಬರ ವರ್ತನೆಯಿಂದ ನೀವು ತೊಂದರೆಗೊಳಗಾಗಬಹುದು. ನೀವು ಅವರೊಂದಿಗೆ ಮಾತನಾಡುವ ಅಗತ್ಯವಿದೆ. ನಿಮ್ಮ ಸಂವಹನ ತಂತ್ರಗಳು ಮತ್ತು ಕೆಲಸದ ಕೌಶಲಗಳು ಪರಿಣಾಮಕಾರಿಯಾಗಿರುತ್ತವೆ.



**ಕುಂಭ:** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು. ನಿಮ್ಮ ಜ್ಞಾನದಾಹ ನಿಮಗೆ ಹೊಸ ಸ್ನೇಹಿತರನ್ನು ಪಡೆಯಲು ಸಹಾಯ ಮಾಡುತ್ತದೆ.



**ಮೀನ:** ಕೆಲವು ಬಿಕ್ಕಟ್ಟುಗಳು ಮತ್ತು ಭಿನ್ನಾಭಿಪ್ರಾಯಗಳು ನಿಮಗೆ ಕಿರಿಕಿರಿ ಹಾಗೂ ಆತಂಕವನ್ನು ತರಬಹುದು. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆ ನಿಸುತ್ತವೆ. ಕೆಲವರು ಅವರಿಗೆ ಸಾಧ್ಯವಿರುವುದಕ್ಕಿಂತ ಹೆಚ್ಚು ನೀಡುವ ಭರವಸೆ ನೀಡುತ್ತಾರೆ ಕೇವಲ ಮಾತನಾಡುವ ಮತ್ತು ಯಾವುದೇ ಫಲಿತಾಂಶಗಳ ನೀಡದ ಇಂಥ ಜನರನ್ನು ಮರೆತುಬಿಡಿ.

# ಬದಲಾಗಿದ್ದು ಕ್ಯಾಲೆಂಡರ್ ಮಾತ್ರವೇನಾ?

> **ಫಸ್ಟ್ ಬರುವ ನಿರೀಕ್ಷೆಯಲ್ಲಿ ಶಾಲೆ-ಕಾಲೇಜುಗಳೇ ಮುಗಿದವು. ಏಳು, ಎಂಟಕ್ಕೆ ಏಳೇಳುತ್ತ ಹಗಲುಗಳೇ ಸವೆದವು. ಕೊನೆಯ ಬೆಂಚಿನ ಹುಡುಗಿಯ ಬದುಕಿನಲ್ಲಿ ಹೊಸ ವರ್ಷ, ಗಂಡ, ಮಕ್ಕಳೂ ಬಂದಿದ್ದಾಯಿತು. ಬೈಸಿಕೊಳ್ಳುತ್ತಲೇ ಅಮ್ಮ ಎದ್ದು ಹೋದಳು. ಕೆಲಸ ಮಾಡಿಸಿಕೊಳ್ಳದೆಯೇ ಅಪ್ಪ ಹೊರಟು ಹೋದ. ಬಂಕ್ ಮಾಡುತ್ತಿರುವಾಗಲೇ ಕಾಲೇಜಿನ ಕೊನೆಯ ದಿನ ತಲುಪಿದೆವು. ಹೊಸ ಕ್ಯಾಲೆಂಡರಿನ ಮೊದಲ ಪುಟ ತಿರುವುವ ಮೊದಲೇ ಗಂಡ/ಹೆಂಡತಿಯ ಜೊತೆ ಆಗಲೇ ಮೂರು ಬಾರಿ ಜಗಳವಾಡಿಯಾಗಿದೆ. ಅದೇ ಸೋಮಾರಿತನ, ಅದೇ ಅಶ್ರದ್ಧೆ, ಅದೇ ಸುಮ್ಮನೆ ವ್ಯಯವಾಗುವ ಮುನ್ನೂರರವತ್ತೈದು ದಿನಗಳ ಮತ್ತೊಂದು ಆವರಣಕ್ಕೆ ಹೊಸ ವರ್ಷ ಎನ್ನುವ ಹೆಸರು ಕೊಟ್ಟು ಕುಣಿಯುತ್ತ, ಕುಡಿಯುತ್ತ, ಕೇಕೆ ಹಾಕುತ್ತ ಪ್ರವೇಶಿಸಿದೆವು!**

ಒಂದಷ್ಟು ಹೊರಟು ನಿಂತ ಸಂಬಂಧಗಳು, ಇನ್ನೊಂದಷ್ಟು ಬಾಗಿಲಿನಲ್ಲಿ ನಿಂತ ಸ್ನೇಹಗಳು, ಬಿಟ್ಟೇ ಬಿಟ್ಟೆನೆಂದುಕೊಂಡ ಚಾಳಿಗಳು, ಸರಿ-ತಪ್ಪುಗಳೆರೆಡರಲ್ಲೂ ಕಾಣಿಸಿಕೊಂಡ ಸ್ವಭಾವಗಳು.. 2025 ಶುರುವಾಗಿದ್ದು ಹೀಗೆ. ಈಗ ಅದು ಮುಗಿಯುತ್ತಿರುವ ಹೊತ್ತಿನಲ್ಲಿ ಒಂದಷ್ಟಕ್ಕೆ ಸ್ಪಷ್ಟಣೆಗಳು ಸಿಕ್ಕಿವೆ. ಇನ್ನೊಂದಷ್ಟು ಹಾಗೇ ಉಳಿದುಕೊಂಡಿವೆ. ಮತ್ತೊಂದಷ್ಟು ಪ್ರಶ್ನೆಗಳ ಹೊಚ್ಚ ಹೊಸ ಪತ್ರಿಕೆ ಈಗಷ್ಟೇ ಅಚ್ಚಾಗಿ ಬಂದಿದೆ. ಒಟ್ಟಾರೆ 2025 ಎನ್ನುವ ಗೊಂದಲದ ವರ್ಷ ಎಂದಿನಂತೆ, ಅತ್ಯಂತ ವೇಗವಾಗಿ ಮುಗಿದಿದೆ.

2025 ಕೊಟ್ಟ ಕ್ಲಾರಿಟಿಗಳು ಕೆಲವು. ಉಳಿಸಿದ ಪ್ರಶ್ನೆಗಳು ಹಲವು. ಎಂದಿನಂತೆ ಒಳ್ಳೆಯ ಅಭ್ಯಾಸಗಳನ್ನು ನಾಳೆ ನಾಳೆ ಎಂದು ಮುಂದೂಡುತ್ತಲೇ ಈ ವರ್ಷ ಕಳೆಯಿತು. ಈ ಹನ್ನೆರಡು ತಿಂಗಳ ಅತ್ಯಮೂಲ್ಯ ಬಿಡುವುಗಳನ್ನು ನುಂಗಿಕೊಂಡಿದ್ದು ಎಂದಿನ ಮೊಬೈಲು. ಅದರಲ್ಲಿ ಬರುವ ರೀಲುಗಳಿಗೆ ಕೆರಳುತ್ತ, ರಾಜಕೀಯಕ್ಕೆ ಬೈಯುತ್ತ, ತಮಾಷೆಗಳಿಗೆ ನಗುತ್ತ, ಫ್ಯಾನ್ ವಾರಿನಲ್ಲಿ ನಮಗೆ ಸಂಬಂಧವೇ ಇಲ್ಲದ ಯಾರದೋ ಪರ ಕತ್ತಿ ಬೀಸುತ್ತ, ಒಟ್ಟಾರೆ ಆ ಪ್ರಪಂಚದ ಮೂಲೆಯ ಯಾವುದೋ ಒಂದು ಹುಲ್ಲಿನ ಕಡ್ಡಿಯಾಗಿಯೇ ವೇಳೆ ಸರಿಯಿತು. ಹಗಲಾಯಿತು. ರಾತ್ರಿಯಾಯಿತು. ತಡ ರಾತ್ರಿ ಮೊಬೈಲು ನೋಡುತ್ತ ನಿದ್ರೆಗೆ ಜಾರಿದ್ದೇ ಗೊತ್ತಾಗಲಿಲ್ಲ. ಕಣ್ತೆರೆದು ನೋಡಿದರೆ ಆಗಲೇ ಹೊಸ ವರ್ಷ!

ಶಾಲೆಗೆ ಹೋಗುತ್ತಿದ್ದ ಮೊದ ಮೊದಲ ದಿನಗಳಲ್ಲಿ ನಮ್ಮ ಕೇರಿಯ ಕಚ್ಚಾ ರಸ್ತೆ ಹಾಗೂ ಊರಿನ ಮುಖ್ಯ ರಸ್ತೆಗಳು ಸೇರುವ ಸರ್ಕಲ್‌ನಲ್ಲಿ ಹೊಸ ವರ್ಷದ ಮೊದಲ ದಿನ ಹೊಸ ವರ್ಷದ ಶುಭಾಶಯಗಳು 1998 ಎಂದು ಬರೆದ ದಪ್ಪನೆಯ ಬರಹ ಕಂಡಿತ್ತು. ಜನವರಿಯ ಚಳಿಯಲ್ಲಿ, ಇಬ್ಬನಿಯ ಮಳೆಯಲ್ಲಿ ತೋಯುತ್ತ ನಿಂತಿದ್ದ ಆ ಚಾಕ್ ಪೀಸ್ ಅಕ್ಷರಗಳನ್ನು ನೋಡಿದಾಗ ಏನೋ ಸಂಭ್ರಮವೆನಿಸಿತ್ತು. ಅದೇನು ಎಂದು ಕೇಳಿದ್ದಕ್ಕೆ ಜೊತೆಯಲ್ಲಿದ್ದ ಗೆಳೆಯ ಇವತ್ತಿನಿಂದ ಎಲ್ಲವೂ ಬದಲಾಗುತ್ತದೆ ಎಂದಿದ್ದ. ಅಂಥಾದ್ದೇನು ಬದಲಾಗುತ್ತದೆಂದು ನಾನು ಅರ್ಧ ಕುತೂಹಲ ಹಾಗೂ ಇನ್ನರ್ಧ ಭಯದಿಂದ ಕಾದಿದ್ದೆ. ಶಾಲೆಗೆ ಹೊಸ ಮೇಷ್ಟರು ಬರಬಹುದೇ? ಬಂದವರು ಹೊಡೆಯುವವರಾಗಿರಬಹುದೇ? ಹೊಸ ಹೊಸ ಪ್ರಶ್ನೆಗಳ ಹೊಸ ಪಠ್ಯ ಪುಸ್ತಕ ಬರಬಹುದೇ? ಊರಿನ ಸರ್ಕಾರಿ ಆಸ್ಪತ್ರೆಗೆ ಹೊಸ ಡಾಕ್ಟರು ಬಂದು ನಮಗೆಲ್ಲ ಮತ್ತೆ ಹೊಸದಾಗಿ ಇಂಜಕ್ಷನ್ ಕೊಡುತ್ತಾರಂತೆ ಎಂಬ ಸುದ್ದಿ ಹಬ್ಬಿ ಕುಳಿತಲ್ಲೇ ಗಡಗಡ ನಡುಗಿದ್ದೆವು. ನನ್ನ ಭಯಸ್ಥ ಗುಣದ ಪರಿಚಯವಿದ್ದ ಅಕ್ಕ ಸಮುದ್ರ ಊರಿಗೆ ಬರುತ್ತೆ ಅಂತೇನೇನೋ ಹೆದರಿಸಿದ್ದಳು. ಅದು ತೀರ್ಥಹಳ್ಳಿ ರೋಡಿಂದ ಬರುತ್ತ ಅಥವಾ ಹೊಸನಗರ ದಾರಿಯಿಂದ ಬರುತ್ತ ಎಂದು ಎರಡೂ ದಿಕ್ಕಿಗೆ ಭೀತನಾಗಿ ಇಣುಕಿದ್ದೆ. ಅಪ್ಪ ಉಪೇಂದ್ರಣ್ಣನ ಅಂಗಡಿಗೆ ಹೊಸ ಕಂಬರ್ಕಟ್ಟು ಬರುತ್ತೆ ಎಂದಿದ್ದ. ಅದರ ದಾರಿಯನ್ನೂ ಕಾದಿದ್ದಾಯಿತು.

ಯಾವುದೂ ಬರಲೇ ಇಲ್ಲ.

ಅದೇ ಮೇಷ್ಟರು ಬಂದು ಅಣ್ಣನು ಮಾಡಿದ ಗಾಳಿಪಟ ಎಂದು ಪದ್ಯ ಹಾಡಿಸಿದರು. ಅದೇ ಕಂಬಾರ್ಕಟ್ಟು ರುಪಾಯಿಗೆ ನಾಲ್ಕರಂತೆ ಬಿಕರಿಯಾಯಿತು. ತೀರ್ಥಹಳ್ಳಿ-ಹೊಸನಗರದ ರಸ್ತೆಯಲ್ಲಿ ನವ ಮಾಸದ ಬಸುರಿಯಂಥಾ ಗುರು ಶಕ್ತಿ ಬಸ್ಸು ಬಂತೇ ಹೊರತು ಸಮುದ್ರ ಬರಲಿಲ್ಲ. ಬಸ್ಸು-ಲಾರಿಗಳು ಓಡಾಡೀ ಓಡಾಡೀ, ನಾವೆಲ್ಲ ನಡೆದೂ ನಡೆದೂ ಹೊಸ ವರ್ಷದ ಶುಭಾಶಯಗಳು ಬರಹ ಅಳಿಸಿ ಹೋಯಿತೇ ಹೊರತು ಮತ್ತೇನೂ ಬದಲಾಗಲೇ ಇಲ್ಲ.

ಹೊಸ ವರ್ಷ ಅಂದರೇನು ಎಂಬುದು ಅರ್ಥವಾದ ದಿನದಿಂದ ಇವತ್ತಿನ ತನಕ ನಾವೆಲ್ಲ ಮಾಡಿಕೊಂಡ ರೆಸೆಲ್ಯೂಷನ್‌ಗಳನ್ನೆಲ್ಲ ಸುಮ್ಮನೆ ಹರಡಿಕೊಂಡು ಕೂರಬೇಕು ಒಮ್ಮೆ. ನಾಳೆಯಿಂದ ಬೆಳಗ್ಗೆ ಬೇಗ ಎದ್ದು ಓದುತ್ತೇನೆ, ಇನ್ಮುಂದೆ ಕೊನೆಯ ಬೆಂಚಿನ ಹುಡುಗಿಗೆ ಲೈನ್ ಹೊಡೆಯುವುದಿಲ್ಲ, ಕ್ಲಾಸಿಗೆ ಫಸ್ಟ್ ಬರುತ್ತೇನೆ, ಅಮ್ಮನಿಗೆ ಬೈಯುವುದಿಲ್ಲ, ಅಪ್ಪನಿಗೆ ಕೆಲಸ ಮಾಡಿಕೊಡುತ್ತೇನೆ, ಕಾಲೇಜಿಗೆ ಬಂಕ್ ಹಾಕುವುದಿಲ್ಲ, ಶ್ರದ್ಧೆಯಿಂದ ದುಡಿದು ಪ್ರಮೋಷನ್ ಗಿಟ್ಟಿಸಿಯೇ ಗಿಟ್ಟಿಸುತ್ತೇನೆ, ಹೆಂಡತಿಯ ಜೊತೆ ತಾಳ್ಮೆಯಿಂದ ವರ್ತಿಸುತ್ತೇನೆ, ಗಂಡನನ್ನು ಯಾವುದಕ್ಕೂ ಪೀಡಿಸುವುದಿಲ್ಲ, ಉಳಿತಾಯ ಮಾಡುತ್ತೇವೆ, ಕುಡಿಯುವುದಿಲ್ಲ

ಹಳೆಯ ವರ್ಷವೊಂದು ಮುಗಿದು ಹೋಗಿ ಮುನ್ನೂರ ಅರವತ್ತೈದು ದಿನಗಳ ಹೊಚ್ಚ ಹೊಸ ಕ್ಯಾಲೆಂಡರ್ ಗೋಡೆಯೇರಿದ ಹೊತ್ತಿನಲ್ಲಿ ನಮಗೆ ನಾವೇ ಕೊಟ್ಟುಕೊಂಡ ಆಶ್ವಾಸನೆಗಳು ಇವು. ಫಸ್ಟ್ ಬರುವ ನಿರೀಕ್ಷೆಯಲ್ಲಿ ಶಾಲೆ-ಕಾಲೇಜುಗಳೇ ಮುಗಿದವು. ಏಳು, ಎಂಟಕ್ಕೆ ಏಳೇಳುತ್ತ ಹಗಲುಗಳೇ ಸವೆದವು. ಕೊನೆಯ ಬೆಂಚಿನ ಹುಡುಗಿಯ ಬದುಕಿನಲ್ಲಿ ಹೊಸ ವರ್ಷ, ಗಂಡ, ಮಕ್ಕಳೂ ಬಂದಿದ್ದಾಯಿತು. ಬೈಸಿಕೊಳ್ಳುತ್ತಲೇ ಅಮ್ಮ ಎದ್ದು ಹೋದಳು. ಕೆಲಸ ಮಾಡಿಸಿಕೊಳ್ಳದೆಯೇ ಅಪ್ಪ ಹೊರಟು ಹೋದ. ಬಂಕ್ ಮಾಡುತ್ತಿರುವಾಗಲೇ ಕಾಲೇಜಿನ ಕೊನೆಯ ದಿನ ತಲುಪಿದೆವು. ಹೊಸ ಕ್ಯಾಲೆಂಡರಿನ ಮೊದಲ ಪುಟ ತಿರುವುವ ಮೊದಲೇ ಗಂಡ/ಹೆಂಡತಿಯ ಜೊತೆ ಆಗಲೇ ಮೂರು ಬಾರಿ ಜಗಳವಾಡಿಯಾಗಿದೆ. ಅದೇ ಸೋಮಾರಿತನ, ಅದೇ ಅಶ್ರದ್ಧೆ, ಅದೇ ಸುಮ್ಮನೆ ವ್ಯಯವಾಗುವ ಮುನ್ನೂರರವತ್ತೈದು ದಿನಗಳ ಮತ್ತೊಂದು ಆವರಣಕ್ಕೆ ಹೊಸ ವರ್ಷ ಎನ್ನುವ ಹೆಸರು ಕೊಟ್ಟು ಕುಣಿಯುತ್ತ, ಕುಡಿಯುತ್ತ, ಕೇಕೆ ಹಾಕುತ್ತ ಪ್ರವೇಶಿಸಿದೆವು!

ಮನಸ್ಸಿನ ಗೋಡೆಯಲ್ಲಿ ಹಳೆಯ ಕ್ಯಾಲೆಂಡರನ್ನು ಕಿತ್ತೆಸೆಯದ ಹೊರತು ಬದುಕಿಗೆ ಯಾವ ಹೊಸ ವರ್ಷವೂ ಬರುವುದಿಲ್ಲ. 2025ರಲ್ಲಿ ಸಹೋದ್ಯೋಗಿಯ ಏಳಿಗೆಗೆ ಕರುಬುತ್ತಿದ್ದವನು, 2020ರಲ್ಲಿ ಇಷ್ಟವಿಲ್ಲದವರು ಮಾಡಿದ ಎಲ್ಲ ಕೆಲಸವನ್ನೂ ಮೊದಲ ನೋಟದಲ್ಲೇ ವಿರೋಧಿಸುತ್ತಿದ್ದವನು, 2018ರಲ್ಲಿ ರಸ್ತೆಯ ಮೇಲೆ ಉಗುಳಿ ನಡೆಯುತ್ತಿದ್ದವನು, 2015ರಲ್ಲಿ ಒನ್ ವೇಯಲ್ಲಿ ಗಾಡಿ ನುಗ್ಗಿಸುತ್ತಿದ್ದವನು, 2013ರಲ್ಲಿ ಎಲ್ಲರಿಗೂ ಹಿಂದಿನಿಂದ ಬೈದು ಎದುರಿಗೆ ಆತ್ಮೀಯತೆ ನಟಿಸುತ್ತಿದ್ದವನು ಇಂದು, ಈಗ, 2026ರಲ್ಲೂ ಹಾಗೇ ಮಾಡುತ್ತೇನೆಂದರೆ, ಕಂಗ್ರಾಜ್ಯುಲೇಷನ್! ನನ್ನ ಪಾಲಿಗೆ ಮುಂದಕ್ಕೆ ಸರಿದಿದ್ದು ಕಾಲ ಮಾತ್ರ. ಬದುಕಲ್ಲ!

ನಿಜ ಬದುಕನ್ನು ಟೈಮ್ ಟೇಬಲ್ ಹಾಕಿಕೊಂಡು, ಸೂತ್ರ ಅನ್ವಯಿಸಿಕೊಂಡು, ಆದರ್ಶಗಳನ್ನು ಹೇರಿಕೊಂಡು ಬದುಕಲಾಗುವುದಲ್ಲ. ಆದರೆ ಸೃಷ್ಟಿ ಮತ್ತದೇ ಜನವರಿ, ಜುಲೈ, ಡಿಸೆಂಬರ್‌ಗಳನ್ನು ತಂದೆಸೆಯುವುದು ಅಂದಿನ ನಾನುವನ್ನು ಇಂದಿನ ನಾನುವಿನ ಜೊತೆ ಹೋಲಿಸಿ ನೋಡಲೆಂದು. ಕಳೆದ ಒಂದೊಂದು ದಿನವೂ ಕಾಲವೆಂಬ ಮಾಷ್ಟ್ರು ತೆಗೆದುಕೊಂಡ ತರಗತಿಯೇ. 2025 ಎಂಬ ಹೆಡ್ ಮಾಸ್ತರ ಮುನ್ನೂರ ಅರವತ್ತೈದು ದಿನಗಳ ತನ್ನ ತರಗತಿಯಲ್ಲಿ ದ್ವೇಷ, ಯುದ್ಧ, ಕಳ್ಳತನ, ಶಿಸ್ತು, ಸಂಸ್ಕಾರ, ಪರಿಶ್ರಮ, ಸಮಚಿತ್ತತೆ, ಪ್ರೀತಿ, ಸೋಲು, ಗೆಲುವು ಎಂಬ ಎಷ್ಟೆಲ್ಲ ಪಾಠ ಮಾಡಿ ಹೋಗಿದ್ದಾನೆ! ಒಂದನೇ ತರಗತಿಯಲ್ಲಿ ಕಲಿತ ಅಆಇಈ ಯ ಅನುಭವದಿಂದ ಎರಡನೇ ತರಗತಿಯಲ್ಲಿ ಪದಗಳನ್ನು ಜೋಡಿಸಿದಂತೆ, ಪಿಯುಸಿಯಲ್ಲಿ ಕಲಿತ ಫಾರ್ಮುಲಾವನ್ನು ಅನ್ವಯಿಸಿ ಇಂಜಿನಿಯರಿಂಗ್ ನಲ್ಲಿ ಲೆಕ್ಕಗಳನ್ನು ಬಿಡಿಸಿದಂತೆ, ಬಿಕಾಂನಲ್ಲಿ ಕಲಿತ ಬ್ಯಾಲೆನ್ಸ್ ಶೀಟನ್ನು ಈಗ ಉದ್ಯೋಗ ಮಾಡುವಾಗ ಕಂಪನಿಯ ಅಕೌಂಟ್ಸ್‌ಗೆ ಬಳಸಿದಂತೆ 2025 ಕಲಿಸಿದ ಅಆಇಈ, ಫಾರ್ಮುಲ, ಬ್ಯಾಲೆನ್ಸ್ ಶೀಟುಗಳ ಆಧಾರದ ಮೇಲೆ 2026ನ್ನು ಬಿಡಿಸುತ್ತ, ಜೋಡಿಸುತ್ತ, ಕಟ್ಟುತ್ತ ಹೋದರಷ್ಟೇ ನಿಜದಲ್ಲೂ ತೇರ್ಗಡೆಯಾದಂತೆ.

ಇಲ್ಲವಾದರೆ ಮಡಚಿ ಡಸ್ಟ್ ಬಿನ್ನಿಗೆಸೆದ ಕ್ಯಾಲೆಂಡರಿಗೂ, ಮುಗಿದ 2025ಕ್ಕೂ ಏನು ವ್ಯತ್ಯಾಸವುಳಿದೀತು?

**- ವಿನಾಯಕ** ಅರಳಸುರಳಿ





# ಸ್ನಾನದ ಮನೆಯೇ ಮಸಣದ ಬಾಗಿಲು!

ಈಗ ನಾನು ಸಿಓಹೆಚ್‌ಬಿ ಎಂದರೆ ಸಾಕು ಓಹ್ ಅದು ಕಾರ್ಬಾಕ್ಸಿ ಹೀಮೋಗ್ಲೋಬಿನ್ ಎಂದು ಹೇಳುವಷ್ಟು ಅದು ಪರಿಚಿತವಾಗಿದೆ. ನೋಡಿ ಈ ಕಾರ್ಬನ್ ಮಾನಾಕ್ಸೈಡ್ ಒಂದು ಅಸ್ಥಿರ ಅನಿಲ ಅಷ್ಟೇ. ಆದರೆ ಅದನ್ನು ವಿಷಕಾರಿ ಎಂದು ನಾಮಕರಣ ಮಾಡಿದ್ದು ರಕ್ತದ ಅಂದರೆ ಹೀಮೋಗ್ಲೋಬಿನ್ ನ ಕಾರ್ಬನ್ ಮಾನಾಕ್ಸೈಡ್ ಪ್ರೇಮ. ಅಂದರೆ ಕೆಟ್ಟದೇನೂ ಇಲ್ಲ. ನಾವು ಅವುಗಳನ್ನು ಕೆಟ್ಟದಾಗಿಸುತ್ತೇವೆ ಅಷ್ಟೇ. ಈ ಕಾರ್ಬನ್ ಮಾನಾಕ್ಸೈಡ್ ಹೇಗೆ ನಮ್ಮನ್ನು ಕೊಲ್ಲುತ್ತದೆ ಎಂದು ನೋಡಿದೆವು. ಈಗ ಯಾವಾಗ ಎಂಬುದು ಪ್ರಶ್ನೆ.

ನೀವು ಹಳೆಯ ಅಂಬರೀಶ್ ಅವರ ಸಿನಿಮಾ ಒಂದನ್ನು ನೆನಪು ಮಾಡಿಕೊಳ್ಳಿ. ಅದರಲ್ಲಿ ನಾಯಕ ತನ್ನ ವೈರಿಯನ್ನು ಕಾರ್ ಶೆಡ್ ನ ಒಳಗೆ ಬಂಧಿಯಾಗಿಸಿ. ಕಾರ್ ಸ್ಟಾರ್ಟ್ ಮಾಡಿ ಎಕ್ಸಿಲರೇಟರ್ ಕೊಡುತ್ತಾನೆ. ಮತ್ತೆ ನೋಡುವಾಗ ವೈರಿ ಸತ್ತಿರುತ್ತಾನೆ. ಸಾಯಲು ಕಾರಣ ಗೊತ್ತಾಗುವುದೇ ಇಲ್ಲ. ನಾಯಕ ಕಾರನ್ನು ಸ್ಟಾರ್ಟ್ ಮಾಡಿದಾಗ ಕಾರು ಸಾಕಷ್ಟಿರುವ ಆಮ್ಲಜನಕವನ್ನು ಬಳಸಿಕೊಂಡು ಇಂಗಾಲದ ಡೈಆಕ್ಸೈಡ್ ಅನ್ನು ಉತ್ಪತ್ತಿ ಮಾಡುತ್ತದೆ. ಇದು ನಿರಪಾಯಕಾರಿ. ಆದರೆ ಕಾರ್ ಶೆಡ್ ನ ಬಾಗಿಲು ಹಾಕಿರುವುದರಿಂದ ಆಮ್ಲಜನಕದ ಕೊರತೆಯಾಗುವುದರಿಂದ ಇಂಗಾಲದ ಡೈಆಕ್ಸೈಡ್ ಬದಲಾಗಿ ಇಂಗಾಲದ ಮಾನಾಕ್ಸೈಡ್ ಉತ್ಪತ್ತಿಯಾಗುತ್ತದೆ. ಇದು ರಕ್ತವನ್ನು ವಿಷವಾಗಿಸಿ ನಾಯಕನ ವೈರಿ ಸತ್ತು ಹೋಗುತ್ತಾನೆ.

ಉತ್ತರ ಭಾರತದಲ್ಲಿ ಅತೀವ ಶೀತವಿರುವ ಕಡೆ ಕೋಣೆಯನ್ನು ಬೆಚ್ಚಗಿಡಲು ಕಲ್ಲಿದ್ದಲಿನ ಅಗ್ಗಿಷ್ಟಿಕೆಯನ್ನು ಬಳಸುತ್ತಾರೆ ನಾವು ಒಲೆಯ ಎದುರು ಕುಳಿತು ಚಳಿ ಕಾಯಿಸುತ್ತೇವಲ್ಲ ಹಾಗೆ. ರಾತ್ರಿ ಬಾಗಿಲು ಹಾಕಿ ಎಲ್ಲರೂ ಒಟ್ಟಿಗೆ ಮಲಗುತ್ತಾರೆ. ಇವರೆಲ್ಲರ ಉಸಿರಾಟ ಕಲ್ಲಿದ್ದಲ ಉರಿಯುವಿಕೆಗಳಿಗೆ ಆಮ್ಲಜನಕ ಬಳಕೆಯಾಗುತ್ತಲೇ ಹೋಗುತ್ತದೆ. ಬಾಗಿಲು ಹಾಕಿರುವುದರಿಂದ ಹೊಸ ಆಮ್ಲಜನಕದ ಸರಬರಾಜು ಇಲ್ಲದೇ ಇರುವುದರಿಂದ ಇರುವ ಆಮ್ಲಜನಕವನ್ನು ಉರಿಯುವ ಕಲ್ಲಿದ್ದಲು ಬಳಸಿಕೊಂಡು ಇಂಗಾಲದ ಮಾನಾಕ್ಸೈಡ್ ಉತ್ಪತ್ತಿಯಾಗುತ್ತದೆ. ಇದನ್ನು ಉಸಿರಾಡುವ ಗಾಢ ನಿದ್ದೆಯಲ್ಲಿರುವವರು ಗಾಢ ನಿದ್ದೆಗೆ ಜಾರುತ್ತಾರೆ. ಒಂದು ತಿಂಗಳ ಹಿಂದೆ ಬೆಳಗಾವಿಯಲ್ಲಿ ನಡೆದಿರುವುದು ಇದೇ.

ಸ್ನಾನ ಮಾಡಲು ಹೆಚ್ಚಿನವರು ಬಿಸಿ ನೀರನ್ನು ಬಳಸುತ್ತಾರೆ. ಬಿಸಿ ನೀರಿನಲ್ಲಿ ಹೆಚ್ಚು ಶಕ್ತಿ ಇರುವುದರಿಂದ ಅದು ಸುಲಭವಾಗಿ ಸ್ವಚ್ಛಗೊಳಿಸುತ್ತದೆ. ನೀವು ಎಣ್ಣೆ ಜಿಡ್ಡಿನ ಪಾತ್ರೆಯನ್ನು ತೊಳೆಯಲು ಕೂಡಾ ಬಿಸಿ ನೀರನ್ನು ಬಳಸುತ್ತೀರಲ್ಲಾ ಹಾಗೆ. ಇದಕ್ಕೆ ಗ್ಯಾಸ್ ಗೀಸರ್ ಅನ್ನು ಬಳಸಿದರೆ ತಕ್ಷಣ ಬಿಸಿ ನೀರು ದೊರೆಯುತ್ತದೆ. ಸ್ನಾನದ ಕೋಣೆಯಲ್ಲಿ ಅಡುಗೆ ಅನಿಲ ಎಂದರೆ ಬ್ಯುಟೇನ್ ಅನಿಲವನ್ನು ಬಳಸಿ ಉರಿ ಹಚ್ಚಿ ಬಿಸಿ ಬಿಸಿ ನೀರು ಪಡೆಯುತ್ತಾರೆ. ಸರಿಯಾದ ವೆಂಟಿಲೇಶನ್ ಇಲ್ಲದ ಮುಚ್ಚಿದ ಸ್ನಾನದ ಕೋಣೆಯಲ್ಲಿ ದೀರ್ಘಕಾಲದವರೆಗೆ ಗೀಸರ್ ಅನ್ನು ಚಾಲೂ ಸ್ಥಿತಿಯಲ್ಲಿರಿಸಿದರೆ ಕಾರ್ಬನ್ ಮಾನಾಕ್ಸೈಡ್ ಉತ್ಪತ್ತಿಯಾಗುವ ಮೂಲಕ ಸಾವು ಸಂಭವಿಸುತ್ತದೆ. ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಘಟನೆಗೆ ಕಾರಣ ಇದೇ. ಹೀಗೆ ಸ್ನಾನದ ಮನೆಯೂ ಮಸಣದ ಬಾಗಿಲಾಗಬಹುದು. ನೀವು ಗ್ಯಾಸ್ ಗೀಸರ್ ಅನ್ನು ಬಳಸುತ್ತಿದ್ದರೆ ಬಾಗಿಲು ತೆರೆದಿಟ್ಟು ನಿಮಗೆ ಸ್ನಾನಕ್ಕೆ ಸಾಕಷ್ಟು ನೀರು ಕಾದ ನಂತರವೇ ನೀವು ಸ್ನಾನದ ಮನೆಯನ್ನು ಪ್ರವೇಶಿಸಬೇಕು. ಮತ್ತೆ ನೀರು ಬಿಸಿ ಮಾಡಬೇಕಾದಾಗ ವೆಂಟಿಲೇಟರ್ ಅನ್ನು ತೆರೆದಿಟ್ಟಿರಬೇಕು ಮತ್ತು ಗಾಳಿ ಹೊರಹಾಕುವ ಫ್ಯಾನ್ ಆನ್ ಮಾಡಿರಬೇಕು. ನೀವು ಸ್ನಾನಗೃಹದೊಳಗಿರುವಾಗ ನೀರು ಕಾಯಿಸುವುದನ್ನು ಆದಷ್ಟೂ ಕಡಿಮೆ ಮಾಡಬೇಕು.

**- ದಿವಾಕರ ಶೆಟ್ಟಿ ಎಚ್,** ಮಂಗಳೂರು

